REGD.NEWS PAPER RNI KARKAN/50347/1988
RNI.Reg.No. KA/BGW/1861/2024-2026
Licenced to post without Pre-payment
Registered Regn.No. PMG/BG/WPP-411/2024-2026
Posted at BANGALORE PSO, MYSORE ROAD, BANGALORE – 560026

Date of publication 18th of every month
Permitted to post on November 27th or 28th instead of 20th or 21st

ಕರ್ನಾಟಕ ಆರ್ಯವೈಶ್ಯ ಮಹಾಸಭಾ (ರಿ)

# ವಾರ್ತಾಪತ್ರ

ಕನ್ನಡ ಮಾಸ ಪತ್ರಿಕೆ



ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು – 560009 ದೂರವಾಣಿ : 080–22206151 – 22206152 – 22206153
Website: www.kavms.com E-mail: kavmss@gmail.com

ಸಂಪಾದಕರು:
ರಾ.ಪ. ರವಿಶಂಕರ್

ಕಾರ್ಯಾಲಯ ಸಮಯ { ವಾರದ ದಿನಗಳಲ್ಲಿ ಬೆಳಿಗ್ಗೆ : 10.30 ರಿಂದ ಸಂಜೆ: 5.30
ಭಾನುವಾರ : ಬೆ. 10.30 ರಿಂದ ಮಧ್ಯಾಹ್ನ : 3.00ರ ವರೆಗೆ

ಸಂಪುಟ : ೩೮ ನವೆಂಬರ್ ೨೦೨೫ ಬೆಲೆ : ೧ ರೂ. ಪುಟಗಳು : ೮ ಸಂಚಿಕೆ : 11

## ಕರ್ನಾಟಕ ಆರ್ಯವೈಶ್ಯ ಮಹಾಸಭಾ (ರಿ)

ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು – ೫೬೦೦೦೯

**ಆತ್ಮೀಯ ಆಮಂತ್ರಣ**

# ವಿಶ್ವ ಆರ್ಯವೈಶ್ಯ ಸಮಾವೇಶ

# GLOBAL ARYAVYSYA SUMMIT

## ಲಾಂಛನ ಹಾಗೂ ಉದ್ದೇಶಗಳ ಬಿಡುಗಡೆ

**ದಿನಾಂಕ 7–12–2025, ಬೆಳಿಗ್ಗೆ 10.00ಕ್ಕೆ**

Jnana Jyoti Auditorium #1 Palace Road Ambedkar Veedhi Gandhi Nagar Bengaluru- 01

### ಉದ್ಘಾಟನೆ:

**ಶ್ರೀ ಟಿ ಜಿ ವೆಂಕಟೇಶ್**
RENOWED BUSINESSMAN AND FORMER MEMBER OF RAJYA SABHA - ANDHRA PRADESH

**ಶ್ರೀ ಕೆ ಶ್ರೀವಾಸನ್**
CHAIRMAN & MANAGING DIRECTOR – EMERALD GROUP

**ಶ್ರೀ ಡಿ ವಿ ಮಂಜುನಾಥ್**
FOUNDER AND MANAGING DIRECTOR OF THE EMMVEE GROUP

**ಆರ್ ಪಿ ರವಿಶಂಕರ್**
PRESIDENT
KARNATAKA ARYAVYSYA MAHASABHA
FEDERATION OF ALL INDIA ĀRYAVYSYA MAHASABHA'S
INTERNATIONAL VAISYA FEDERATION

Scan for Location

## ಸರ್ವರಿಗೂ ಆದರದ ಸ್ವಾಗತ

# ನಮಗೆ ಧ್ವಜ ಏಕೆ ಬೇಕು?



**ಧ್ವಜವೆಂದರೆ ಬರಿ ವಸ್ತ್ರವೇ ಅಲ್ಲ; ಅಭಿಮಾನದ ಕುರುಹು. ಧ್ವಜ ಅಥವಾ ಪತಾಕೆ ಒಂದು ನಾಡು-ದೇಶ ಅಥವಾ ಸಂಘ-ಸಂಸ್ಥೆ-ಸಂಘಟನೆಯ ಅಸ್ಮಿತೆಯ ಸಂಕೇತ. ಧ್ವಜವು ಅಭಿಮಾನವನ್ನು ಜಾಗೃತವಾಗಿಸಿ ಅದನ್ನು ಕ್ರಿಯಾಶೀಲಗೊಳಿಸುವ ಸಾಧನ.**

ನಮ್ಮ ಸಮುದಾಯಕ್ಕೆಂದೇ ಧ್ವಜವೊಂದು ರೂಪುಗೊಂಡರೆ ಅದು ಆರ್ಯವೈಶ್ಯ ಕುಲದ ಹೆಮ್ಮೆಯ ಪ್ರತೀಕ ವಾಗುತ್ತದೆ. ಧ್ವಜವು ನಮ್ಮ ನರನಾಡಿಗಳಲ್ಲಿ, ಧಮನಿ ಧಮನಿಗಳಲ್ಲಿ, ಅಭಿಮಾನವನ್ನು ದೀಪ್ತಗೊಳಿಸಿ ನಾವೆಲ್ಲರೂ ಒಂದು ಎಂಬ ಭಾವವನ್ನು ಸ್ಫುರಿಸುವಂತೆ ಮಾಡುತ್ತದೆ. ಅದು ನಮ್ಮ ಕರ್ನಾಟಕ ಆರ್ಯವೈಶ್ಯ ಕುಲದ ಆಶೋತ್ತರಗಳ ಪ್ರತೀಕವಾಗಿ ನಿಲ್ಲುತ್ತದೆ. ಧ್ವಜಸಂಹಿತೆಯೊಂದು ರೂಪುಗೊಂಡು, ಜಾರಿಯಾದರೆ ನಮ್ಮ ಪ್ರಗತಿಯ ವೇಗ ಹೆಚ್ಚಾಗಬಲ್ಲದು. ಮಿಗಿಲಾಗಿ ಅದು ಅಪರಿಮಿತ ಆತ್ಮವಿಶ್ವಾಸದ ಸಂಕೇತವಾಗುತ್ತದೆ. ಧ್ವಜಗಳಿಗೆ ಒಂದು ಸುದೀರ್ಘವಾದ ಪರಂಪರೆಯಿದೆ. ಅವು ಪೌರಾಣಿಕ, ಚಾರಿತ್ರಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ಸಾಮುದಾಯಿಕತೆಗಳ ಭಾಗವಾಗಿವೆ. ಧ್ವಜ ಎಂದರೆ ನಮ್ಮದು ಎಂಬ ಆಪ್ತಭಾವ. ಅದು ಸ್ವಾಭಿಮಾನದ ಅನಾವರಣ. ಧ್ವಜದ ಪರಿಕಲ್ಪನೆಯೇ ನಾವು ಸಾಧನೆಯ ಹಾದಿಯಲ್ಲಿ ಅಡಿಯಿಡುತ್ತಿದ್ದೇವೆ ಎಂದು ಎದೆಯುಬ್ಬಿಸಿ ಹೇಳುವ ಹಾಗಾಗುತ್ತದೆ. ಹಾಗಾಗಿ ನಮಗೆ ನಮ್ಮದೇ ಆದ ಧ್ವಜ ಬೇಕು. ಅದು ಎಲ್ಲವನ್ನೂ ತುಂಬಿಕೊಂಡು ಕಲಸು ಮೇಲೋಗರ ಆಗಬಾರದು. ಅದು ಯಾವುದೇ ಹಿನ್ನೆಲೆ ಯಿದ್ದರೂ ಎದ್ದುಕಾಣು ವಂತಿರಬೇಕು. **ನಮ್ಮ ಧ್ವಜ ಹೇಗಿರಬೇಕು,** ಎಂತಿರಬೇಕು, ಅದರಲ್ಲಿ ಏನಿರಬೇಕು ಎಂಬುದನ್ನು ಆರ್ಯವೈಶ್ಯ ಬಂಧುಗಳು ಲಿಖಿತ ರೂಪದಲ್ಲಿ ತಿಳಿಸಬೇಕೆಂದು ಬಿನ್ನಹ.

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ**

**ಶ್ರೀ ಆರ್ ಲ್ ಪ್ರಭಾಕರ್**
ಅಧ್ಯಕ್ಷರು, ಶ್ರೀ ವಾಸವಿ ದೇವಾಲಯಗಳ ಒಕ್ಕೂಟ
ಮೊಬೈಲ್: 94480 45683

**ಶ್ರೀ ಪಿ ನಾಗೇಶ್‌ಬಾಬು**
ಕಾರ್ಯದರ್ಶಿಗಳು, ಶ್ರೀ ವಾಸವಿ ದೇವಾಲಯಗಳ ಒಕ್ಕೂಟ
ಮೊಬೈಲ್: 9845015030

## ಅಧ್ಯಕ್ಷರ ನುಡಿ

## ವಿಶ್ವ ಆರ್ಯವೈಶ್ಯ ಸಮಾವೇಶ GLOBAL ARYAVYSYA SUMMIT

ಆರ್ಯವೈಶ್ಯ ಜನತೆಗೆ ರಕ್ತಗತವಾಗಿ ಬಂದಿರುವ ವ್ಯಾಪಾರೋದ್ಯಮಗಳನ್ನು ಕಾಲಮಾನಕ್ಕೆ ತಕ್ಕಂತೆ ಅಭಿವೃದ್ಧಿ ಪಡಿಸುವುದು/ನವೋದ್ಯಮಗಳನ್ನು ಆರಂಭಿಸುವ ಬಗ್ಗೆ ಚಿಂತನೆ ನಡೆಸದೆ ವ್ಯಾಪಾರ ವ್ಯವಹಾರಗಳಿಂದ ವಿಮುಕ್ತರಾಗುತ್ತಿರುವುದು... ಕೆಲಸ ಕೊಡುತ್ತಿದ್ದ ಸಮಾಜದ ಯುವ ಪೀಳಿಗೆ ಕೆಲಸಗಳನ್ನು ಅರಸುತ್ತಾ ಸಾಗಿರುವುದು ಆತಂಕದ ವಿಚಾರವಲ್ಲವೇ? ಅತಿವೃಷ್ಟಿ, ಅನಾವೃಷ್ಟಿ, ನೈಸರ್ಗಿಕ ವಿಕೋಪಗಳಂತಹ ಸಂದರ್ಭದಲ್ಲಿಯೂ **ತಮ್ಮ ವ್ಯಾಪಾರ ವ್ಯವಹಾರಗಳಲ್ಲಿ ಸಾಹಸ ಮೆರೆದ ಸಮಾಜ ನಮ್ಮದು. ಪರಿಸ್ಥಿತಿಯ ಸವಾಲುಗಳನ್ನು ದಿಟ್ಟವಾಗಿ ಎದುರಿಸಿ ಲೋಕಮಾನ್ಯರಾಗಬೇಕಿದ್ದ ನಮ್ಮ ಸಮಾಜದ ಯುವಶಕ್ತಿ ಹಂತ ಹಂತವಾಗಿ ಕಣ್ಮರೆಯಾಗುತ್ತಿದೆ.** ವ್ಯಾಪಾರೋದ್ಯಗಳ ಜಾಗತಿಕ ಸವಾಲುಗಳನ್ನು ಸ್ವೀಕರಿಸಿ, ಮೆಟ್ಟಿ ನಿಂತು ಉದ್ಯಮಗಳಲ್ಲಿ ಸಾಧಕರಾಗುವ ಬದಲಿಗೆ ಉದ್ಯಮಗಳಿಂದ ವಿಮುಖರಾಗುತ್ತಿರುವುದು ಆರ್ಯವೈಶ್ಯ ಸಮಾಜದ ವಂಶವಾಹಿನಿಗೆ ಗೌರವ ಶೋಭೆಯೇ?

ಇಡೀ ಮಾನವ ಕುಲದ ಚರಿತ್ರೆಯನ್ನು ಅವಲೋಕಿಸಿದರೆ, ಇಂದು ಇರುವಷ್ಟು ಅವಕಾಶಗಳು ಹಿಂದೆಂದೂ ಇರಲಿಲ್ಲ. ಹಿಂದಿನ **ಇಪ್ಪತ್ತು ಶತಮಾನಗಳ ಮಾನವ ವಿಕಾಸದ ಚರಿತ್ರೆಯಲಿ ಹಿಂದೆಂದು ಸಾಧ್ಯವಾಗದಂತಹ ತಂತ್ರಜ್ಞಾನ ಹಾಗೂ ಅವಿಷ್ಕಾರಗಳನ್ನು 21 ಶತಮಾನವು ವಿಶ್ವದ ಮುಂದಿಟ್ಟಿದೆ,** ಮಾನವನ ಸಾಮರ್ಥ್ಯ ಅದ್ಭುತವಾಗಿ ಬೆಳೆಯುತ್ತಿದೆ. ನಾಗಾಲೋಟದಲ್ಲಿ ಸಾಗುತ್ತಿರುವ ಜಾಗತಿಕ ಪ್ರಪಂಚದಲ್ಲಿ ನಾವು ಮತ್ತಷ್ಟು ಜಾಗೃತರಾಗಬೇಕು, ಕ್ರಿಯಾಶೀಲರಾಗಬೇಕು, ಸಾಧನೆಯ ಬೆನ್ನತ್ತಿ, ಛಲದಿಂದ ಸಾಧಿಸಿ ಛಲದಂಕ ಮಲ್ಲರಾಗಿ ವಿಶ್ವವೇ ನಮ್ಮತ್ತ ನೋಡುವಂತಹ ಅಸಾಧರಣಾ ಪ್ರತಿಭೆಗಳಾಗಿ ಹೊರಹೊಮ್ಮಬೇಕು. ಜೀವನದಲ್ಲಿ ಅಂತಹ ಯಶಸ್ಸು ಪಡೆದು ಫಲಗಳನ್ನು ಪಡೆಯಲು ಮೂರು ಬಲಶಾಲಿ ಮಂತ್ರಗಳನ್ನು ಅರಿತುಕೊಂಡು ಅನುಷ್ಠಾನ ಮಾಡಬೇಕು. ಅಂತಹ ದಿವ್ಯ ಮಂತ್ರಗಳು ಎಂದರೇ ಬಯಕೆ-ನಂಬಿಕೆ-ನಿರೀಕ್ಷೆಗಳು. **ನಿದ್ರಿಸಲೂ ಬಿಡದಂತಹ ಕನಸುಗಳು ನಿಮ್ಮದಾಗಬೇಕು. ಕನಸುಗಳನ್ನು ಸಾಕಾರಗೊಳಿಸಲು ಸದಾ ಜಾಗೃತರಾಗಿರಬೇಕು.** ದೃಢಸಂಕಲ್ಪ ಪರಿಸ್ಥಿತಿಗಳನ್ನು ನಿಭಾಯಿಸುವ ಕಲೆಯನ್ನು ಕರಗತ ಮಾಡಿಕೊಳ್ಳಬೇಕು. ನಾವು ಪ್ರಪಂಚದ ಎದುರು ಸಮರ್ಥವಾಗಿ ನಿಲ್ಲದ ಹೊರತು ಯಾರು ನಮ್ಮನ್ನು ಗೌರವಿಸಲಾರರು. ಸಾಧನೆಯ ಹಾದಿಯಲ್ಲಿ ಭಯಕ್ಕೆ ಜಾಗವಿರಬಾರದು. **ಶಕ್ತಿ-ಶಕ್ತಿಯನ್ನು ಮಾತ್ರ ಗೌರವಿಸುತ್ತದೆ. ನಮ್ಮ ಅಭಿವೃದ್ಧಿಯ ಶಿಲ್ಪಿಗಳು ನಾವೇ ಆಗಬೇಕು.**

**ಗುರಿ ಮುಟ್ಟುವವರೆವಿಗೂ ಯಾವುದೇ ರಾಜಿಯಿಲ್ಲ, ಹೊಂದಾಣಿಕೆ ಇರಬಾರದು.** ಸೃಷ್ಟಿಯ ಅದ್ಭುತ ನೀವು, ಸದೃಢ ಭಾರತ ನಿರ್ಮಾಣದತ್ತ ಮುಖಮಾಡಿ. ನಾಗಾಲೋಟದಲ್ಲಿ ಬೆಳೆಯುತ್ತಿರುವ ಉದ್ಯಮ ಪ್ರಪಂಚ ಭೂಮಿಯ ಯಾವುದೇ ಭಾಗದಲ್ಲಿದ್ದರು ವಿಶ್ವವ್ಯಾಪ್ತಿಯಾಗಿ ವ್ಯಾಪಾರೋದ್ಯಮಗಳನ್ನು ಬೆಳೆಸಿ, **ಸಾವಿರ-ಸಾವಿರ ಉದ್ಯೋಗಗಳನ್ನು ಸೃಷ್ಟಿಸುವ ಸಾಮರ್ಥ್ಯ ಮತ್ತು ಹೊಸ ಅನ್ವೇಷಣೆಗಳ ಬಗ್ಗೆ ದೇಶದ ಭವಿಷ್ಯದ ಬೆನ್ನೆಲುಬಾಗಿರುವ ಯುವ ಪೀಳಿಗೆ ಮೈಕೊಡವಿ ಎದ್ದು ನಿಲ್ಲಬೇಕು,** ಆರ್ಯವೈಶ್ಯ ಜನಾಂಗದ ವಂಶ ವಾಹಿನಿಯಲ್ಲಿಯೇ ಇರುವ ವ್ಯಾಪಾರದ ಸುಗಂಧವನ್ನು ರಾಷ್ಟ್ರ ಬೆಳವಣಿಗೆಗಾಗಿ ಹಂಚಬೇಕು. ಉದ್ಯೋಗ ಅರಸಿ ಹೋಗುವ ಬದಲಿಗೆ ಉದ್ಯೋಗ ದಾತರಾಗಬೇಕು, **ಮಾಸಿಕ ವೇತನಕ್ಕಾಗಿ ಕೈಚಾಚುವ ಕೈಗಳು ನಿಮ್ಮದಾಗಬಾರದು. ನೀವು ಕೇವಲ ಬದುಕಲು ಇಚ್ಛಿಸುವುದಾದರೆ ಮಾತ್ರ ಉದ್ಯೋಗಕ್ಕೆ ಹೋಗಿ, ಬದುಕಿನಲ್ಲಿ ಸಾಧಿಸಬೇಕೆನ್ನುವುದಾದರೆ ಉದ್ಯಮಿಗಳಾಗಿ.** ನೀವು ಉದ್ಯಮಿಗಳಾಗಲು ಅವಶ್ಯವಿರುವ ತಾಂತ್ರಿಕ ಸಲಹೆ, ಕಾನೂನು ಸಲಹೆ, ಕೇಂದ್ರ-ರಾಜ್ಯ ಸರ್ಕಾರಗಳ ಸವಲತ್ತುಗಳು ಮತ್ತು ಅದಕ್ಕಿರುವ ಕಾನೂನು ಪ್ರಕ್ರಿಯೆಗಳು ಆರ್ಥಿಕ ಸಂಗ್ರಹಣೆಗಾಗಿ ಸಲಹೆಗಳು ಇತ್ಯಾದಿ ಅವಶ್ಯ ಮಾಹಿತಿಗಳನ್ನು ನೀಡುವ ಯೋಜನೆ ವಿಶ್ವ ಆರ್ಯವೈಶ್ಯ ಸಮಾವೇಶ.

**ದಿನಾಂಕ: 07-12-2025ರ ಭಾನುವಾರ** ಬೆಂಗಳೂರು ನಗರ, ಗಾಂಧೀ ನಗರದ ಬೆಂಗಳೂರು ಸಿಟಿ ವಿಶ್ವವಿದ್ಯಾಲಯದ ಆವರಣದಲ್ಲಿರುವ **ಜ್ಞಾನಜ್ಯೋತಿ ಸಭಾಂಗಣದಲ್ಲಿ ವಿಶ್ವ ಆರ್ಯವೈಶ್ಯ ಸಮಾವೇಶದ ಮುನ್ನುಡಿ ಬರೆಯುವ ಲಾಂಛನ ಹಾಗೂ ಉದ್ದೇಶಗಳ ಬಿಡುಗಡೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಯಾರು ಉತ್ತಮ ಭವಿಷ್ಯವನ್ನು ಅಪೇಕ್ಷಿಸುವರೋ, ಯಾರು ಉದ್ಯೋಗದಾತರಾಗಲು ಆಶಿಸುವರೋ, ಯಾರು ತಮ್ಮ ಬುದ್ಧಿಶಕ್ತಿಯನ್ನು ಜಾಗತಿಕ ಪ್ರಪಂಚಕ್ಕೆ ಕೊಂಡ್ಯೊಯುವ ಸವಾಲನ್ನು ಸ್ವೀಕರಿಸಲು ಸಿದ್ದರಿರುವರೋ ಅವರೆಲ್ಲರಿಗೂ ಕೆಂಪು ಹಾಸಿನ ಸ್ವಾಗತ.**

ಬಂಧುಗಳೇ, **ದಿನಾಂಕ: 07-12-2025ರ ಕಾರ್ಯಕ್ರಮ ಭಾಷಣಗಳ ಕಾರ್ಯಕ್ರಮವಲ್ಲ,** ನಿಮ್ಮ ಭವಿಷ್ಯ ರೂಪಿಸಲು ಮಾರ್ಗದರ್ಶನ ನೀಡುವ ಕಾರ್ಯಕ್ರಮ. ಇದು ಕೇವಲ ಸಾಧಕರ ಪರಿಚಯ ಮಾಡುವ ವೇದಿಕೆಯಲ್ಲ ಇನ್ನಷ್ಟು ಸಾಧಕರನ್ನು ಸೃಷ್ಟಿಸುವ ವೇದಿಕೆ. ಜ್ಞಾನ- ವಿಜ್ಞಾನ- ಸುಜ್ಞಾನ-ತಂತ್ರಜ್ಞಾನ-ಅನ್ವೇಷಣೆ-ಆವಿಷ್ಕಾರಗಳ ಬಗ್ಗೆ ಮಾಹಿತಿಗಳ ಹೊಳೆಹರಿಸಿ, ನಿಮ್ಮ ಆತ್ಮವಿಶ್ವಾಸಕ್ಕೆ ಮತ್ತಷ್ಟು ಸ್ಪೂರ್ತಿ ಚೈತನ್ಯಗಳನ್ನು ತುಂಬಿ ವಿಶ್ವ ಮಾರುಕಟ್ಟೆಗೆ ನಿಮ್ಮನ್ನು ಪರಿಚಯಿಸುವ ಮಹತ್ವಾಕಾಂಕ್ಷಿ ಯೋಜನೆ-ಯೋಚನೆ ಮಹಾಸಭೆಯದ್ದು. ಆಲೋಚನೆಗಳು ಸಾಕಾರವಾಗಿ ಸಮರ್ಪಕವಾದ ಗುರಿಮುಟ್ಟಲು ತಮ್ಮಗಳ ಪರಿಪೂರ್ಣ ಸಹಕಾರ ಸರ್ವರೀತಿಯಿಂದಲೂ ಅತ್ಯವಶ್ಯ.

**ತಪ್ಪದೇ ಸಮಯಕ್ಕೆ ಸರಿಯಾಗಿ ಆಗಮಿಸಿ, ಆಸಕ್ತರನ್ನು ಕರೆತನ್ನಿ. ದೇಶಕಟ್ಟುವ ಯುವಪೀಳಿಗೆ ಕಾರ್ಯಕ್ರಮದ ಮುಖ್ಯವಾಹಿನಿಯಲ್ಲಿ ಕಾಣುವಂತಾಗಬೇಕು. ಇದು ನಮ್ಮ ಬಯಕೆ... ನಿಮ್ಮ ಬಯಕೆ... ನಿರೀಕ್ಷೆಯಲ್ಲಿ,**

**ಬದುಕಿನಲ್ಲಿ ಬೆಳಕು ಹುಡುಕುವ ಬದಲು,**
**ನೀವೇ ಬೆಳಕಿನ ಕಿರಣವಾಗಿ ರೂಪುಗೊಂಡು**
**ನೊಂದವರ ಪಾಲಿನ ನಂದಾದೀಪವಾಗಿ**
**ಮನೆ, ಮನಗಳ ಮೇಲೆ ಬೆಳಕ ಚೆಲ್ಲಿ**
**ಆರದೇ ಉರಿಯಲಿ ಮಾನವೀಯತೆಯ ಜ್ಯೋತಿ.**



– ಆರ್ ಪಿ ರವಿಶಂಕರ್, ಅಧ್ಯಕ್ಷರು

ಹೆಚ್ಚಿನ ಮಾಹಿತಿಗಳಿಗಾಗಿ ಕರ್ನಾಟಕ ಆರ್ಯವೈಶ್ಯ ಮಹಾಸಭಾದ Social Media Page ಗಳನ್ನು visit ಮಾಡಿ | Karnataka Aryavysya Mahasabha

# ಆರ್ಯವೈಶ್ಯ ಸಾಧಕರಿಗೆ ವಾಸವಿ ಎಕ್ಸೆಲೆನ್ಸ್ 2025 ರ ಕಿರೀಟ

**ಸಾಧನೆ ಅನ್ನೋ ಸರಳ ಪದದಲ್ಲಿ ಸಾವಿರ ಕಷ್ಟಗಳು ಇವೆ, ಎಲ್ಲರೂ ಎಲ್ಲವನ್ನು ಸಾಧಿಸಲು ಸಾಧ್ಯವಿಲ್ಲ. ಅವರವರ ಆಸಕ್ತಿ, ತಾಳ್ಮೆ, ನಿರಂತರ ಪ್ರಯುತ್ನ, ಛಲಬಿಡದೆ ಹೋರಾಡಿ ಕಷ್ಟದ ಕೆಲಸವನ್ನು ಇಷ್ಟವಾಗಿಸಿಕೊಂಡು ಕಾರ್ಯ ಸಾಧಿಸಿದಾಗ ಯಶಸ್ಸಿನ ದಡ ಸೇರಲು ಸಾಧ್ಯ. ಅಂತಹ ಹತ್ತು ಹಲವು ಯಶಸ್ಸುಗಳನ್ನು ಸಾಕಾರ ಪಡಿಸಿದವರು ಸಾಧಕರಾಗುತ್ತಾರೆ, ಸಮಾಜಕ್ಕೆ ಶಕ್ತಿಯಾಗುತ್ತಾರೆ, ನಾಡು ಕಟ್ಟುವ ಕಲಿಗಳಾಗಿ ಇತರರಿಗೆ ಆದರ್ಶಕರಾಗುತ್ತಾರೆ.**



ಆರನೇ ವಾಸವಿ ಎಕ್ಸಲೆನ್ಸ್ ಪ್ರಶಸ್ತಿ ಪ್ರಧಾನ ಸಮಾರಂಭ ಉದ್ಘಾಟಿಸುತ್ತಿರುವ ಸಂಸದರಾದ ಶ್ರೀ ಪಿ ಸಿ ಮೋಹನ್ ಹಾಗೂ ಇತರ ಗಣ್ಯರು

ಸಾಧಕರಾಗಲು ನಿರ್ಧಿಷ್ಟವಾದ ಕ್ಷೇತ್ರಗಳೇನಿಲ್ಲ, ಸಾಧನೆಗೆ ನೂರಾರು ಕ್ಷೇತ್ರಗಳು, ಹತ್ತಾರು ದಾರಿಗಳಿವೆ. ಯಾವ ಕ್ಷೇತ್ರದಲ್ಲಿ ನಾವು ಸಾಧಿಸಲು ಆಶಿಸುತ್ತೇವೆಯೋ ಅದು ನಮ್ಮ ಇಚ್ಛೆಗೆ ಬಿಟ್ಟದ್ದು. ಒತ್ತಡದ ಪರಸ್ಥಿತಿಯನ್ನು ಎದುರಿಸುವ ಶಕ್ತಿ ಇರುವವರಿಗೆ ಮಾತ್ರ ಸಾಧನೆ ಮಾಡುವ ಸಾಮರ್ಥ್ಯ ಇರುತ್ತದೆ.  ಯಶಸ್ಸು ಎನ್ನುವುದು ಒಮ್ಮೆಲೆ ಸಿಗುವುದಿಲ್ಲ, ನಿತ್ಯ ನಿರಂತರ ಪ್ರಯತ್ನಗಳ ನಂತರವಷ್ಟೆ ಯಶಸ್ಸನ್ನು ಅಪೇಕ್ಷಿಸಬಹುದು. ಅಂತಹ ಧೀಮಂತ ಸಾಧಕರನ್ನು ಹುಡುಕಿ ಕರೆತಂದು ಅವರನ್ನು ಅಭಿನಂದಿಸುವ ಮೂಲಕ ಇತರರಿಗೂ ಸ್ಪೂರ್ತಿ ಅಗುತ್ತದೆ. ಅಂತಹ ಸಾಧಕರನ್ನು ಗುರುತಿಸಿ, ಸನ್ಮಾನಿಸಿ, ಸಮಾಜಕ್ಕೆ ಪರಿಚಯಿಸುವ ಮಹೋನ್ನತ ಕಾರ್ಯವನ್ನು ಪ್ರತೀ ವರ್ಷವೂ ಮಾಡುತ್ತಾ ಸಾಧಕರ ಮುಡಿಗೆ ಪ್ರಶಸ್ತಿಯ ಕಿರೀಟ ಧಾರಣೆ ಮಾಡಿ ಅಭಿನಂದಿಸುವ ಸತ್ವಪೂರ್ಣ ಕಾರ್ಯಕ್ರಮವನ್ನು ಕರ್ನಾಟಕ ಆರ್ಯವೈಶ್ಯ ಮಹಾಸಭೆಯು ನಾಡಿನ ಪ್ರತಿಷ್ಠಿತ ಸುದ್ದಿವಾಹಿನಿ ಏಷ್ಯಾನೆಟ್ ಸುವರ್ಣಸುದ್ಧಿವಾಹಿನಿ ಮತ್ತು ಹೆಸರಾಂತ ದಿನಪತ್ರಿಕೆ ಕನ್ನಡಪ್ರಭ ಸಹಯೋಗದೊಂದಿಗೆ ಕಳೆದ 6 ವರ್ಷಗಳಿಂದ ನಡೆಸಿಕೊಂಡು ಬರುತ್ತಿದೆ.



## 2025ರ ವಾಸವಿ ಎಕ್ಸಲೆನ್ಸ್ ಪ್ರಶಸ್ತಿ ಪುರಸ್ಕೃತರು

ಆರ್ಯವೈಶ್ಯ ಸಮುದಾಯದಲ್ಲಿ ಗುರುತಿಸಿ ನೀಡುತ್ತಿರುವ ಪ್ರತಿಷ್ಠಿತ ಪ್ರಶಸ್ತಿ ವಾಸವಿ ಎಕ್ಸಲೆನ್ಸ್ ಪ್ರಶಸ್ತಿ ಸಮಾರಂಭವನ್ನು ಇದೇ ದಿನಾಂಕ 16–11–2025ರ ಭಾನುವಾರ ಸಂಜೆ 6.00 ಗಂಟೆಗೆ ಅರಮನೆ ಮೈದಾನ, ಗೇಟ್ ನಂ 09, ಪ್ರಿನ್ಸೆಸ್ ಶ್ರೈನ್ ಸಭಾಂಗಣದಲ್ಲಿ ಅದ್ದೂರಿಂದ ನಡೆಸಲಾಯಿತು.

ಪ್ರಶಸ್ತಿ ಪ್ರಧಾನ ಸಮಾರಂಭದ ಮುಖ್ಯ ಆಹ್ವಾನಿತರಾಗಿ ಆಗಮಿಸಿದ್ದ ಬೆಂಗಳೂರು ಕೇಂದ್ರ ಲೋಕಸಭಾ ಸದಸ್ಯರಾದ ಶ್ರೀ ಪಿ ಸಿ ಮೋಹನ್, ಕರ್ನಾಟಕ ವಿಧಾನಪರಿಷತ್ತಿನ ಶಾಸಕರಾದ ಶ್ರೀ ಡಿ ಎಸ್ ಅರಣ್, ಸುವರ್ಣ ವಾಹಿನಿಯ ರಾಜಕೀಯ ಸಂಪಾದಕರಾದ ಪ್ರಶಾಂತ್ ನಾಥು ತುಮಕೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಪ್ರೊ.ವೆಂಕಟೇಶ್ವರಲುರವರೊಂದಿಗೆ ಪ್ರಶಸ್ತಿ ಪುರಸ್ಕೃತರನ್ನು ಆರತಿ ಬೆಳಗಿ, ಪುಷ್ಪವೃಷ್ಟಿಯೊಂದಿಗೆ, ಜಾನಪದ ಕಲಾವಿದರ ತಂಡದೊಂದಿಗೆ  ಸಾಂಪ್ರದಾಯಿಕವಾಗಿ ಸಭಾಂಗಣಕ್ಕೆ ಬರಮಾಡಿಕೊಳ್ಳಲಾಯಿತು. ಸಂಜೆ 6 ಗಂಟೆಗೆ ಸರಿಯಾಗಿ ರಾಷ್ಟ್ರಗೀತೆಯೊಂದಿಗೆ ಪ್ರಾರಂಭವಾದ ಸಮಾರಂಭಕ್ಕೆ ಮಹಾಸಭೆಯ ಅಧ್ಯಕ್ಷರಾದ ಶ್ರೀ ಆರ್ ಪಿ ರವಿಶಂಕರ್‌ರವರು ಸ್ವಾಗತ ಕೋರಿ ಪುರಸ್ಕೃತರ ಸೂಕ್ಷ್ಮ ಪರಿಚಯವನ್ನು ಮಾಡಿಕೊಟ್ಟರು, ಶ್ರೀ ಪಿ ಸಿ ಮೋಹನ್‌ರವರು  ಸಮಾರಂಭವನ್ನು ಉದ್ಘಾಟಿಸಿ ಮಾತನಾಡುತ್ತಾ ಅರ್ಯವೈಶ್ಯ ಸಮಾಜ, ಜಾಗೃತ ಸಮಾಜ ಘನ ಸರ್ಕಾರಗಳಿಂದ ಏನನ್ನೂ ಅಪೇಕ್ಷಿಸದೆ, ತಮ್ಮಲ್ಲಿರುವ ಸಂಪನ್ಮೂಲಗಳೊಂದಿಗೆ ಸಮಾಜದ ಬಡಜನತೆಯ ಅಭಿವೃದ್ಧಿಗೆ ಕಾರ್ಯನಿರ್ವಹಿಸುತ್ತಿದೆ. ಮಹಾಸಭೆ ಯೋಜನೆಗಳು ಸಮಾಜದ ಪ್ರಗತಿಗೆ ಪೂರಕವಾಗಿದ್ದು ಇತರರಿಗೆ ಆದರ್ಶವಾಗಿದೆ. ನಾನು ಸದಾಕಾಲ ಯಾವುದೇ ಸಂದರ್ಭದಲ್ಲಿ ನಿಮ್ಮ ಸೇವೆಗೆ ಸಿದ್ಧವಾಗಿರುತ್ತೇನೆ ಎಂದು ತಿಳಿಸಿ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನೆಗಳನ್ನು ತಿಳಿಸಿದರು.

ಸಭೆಯನ್ನುದ್ದೇಶಿಸಿ ಮಾತನಾಡಿದ ವಿಧಾನಪರಿಷತ್ ಸದಸ್ಯರಾದ ಶ್ರೀ ಡಿ ಎಸ್ ಅರುಣ್‌ರವರು  ಇಂತಹ ಪ್ರಶಸ್ತಿ ಪ್ರಧಾನ ಸಮಾರಂಭಗಳ ಮೂಲಕ ಸಮಾಜದ ವಿವಿಧ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿ ಯಶಸ್ವಿಯಾಗಿರುವ ಸಾಧಕರನ್ನು ಹುಡುಕಿ ಸಮಾಜಕ್ಕೆ ಪರಿಸಯಿಸುವ ಮೂಲಕ ನಮ್ಮ ಸಮಾಜದ ಘನತೆ, ಗೌರವ ಹೆಚ್ಚುತ್ತದೆಂದು ಅಭಿಪ್ರಯಿಸಿದರು.



ಕಾರ್ಯಕ್ರಮಕ್ಕೆ ಆಗಮಿಸುತ್ತಿರುವ ಕೇಂದ್ರ ಸಚಿವರಾದ ಶ್ರೀ ಪ್ರಹ್ಲಾದ್ ಜೋಶಿರವರನ್ನು ಆತ್ಮೀಯವಾಗಿ ಸ್ವಾಗತಿಸುತ್ತಿರುವುದು

ಕೇಂದ್ರ ಸಚಿವರಾದ ಶ್ರೀ ಪ್ರಹ್ಲಾದ ಜೋಷಿಯವರು ಮಾತನಾಡಿ ಆರ್ಯವೈಶ್ಯ ಸಮಾಜ ಸ್ವಾಭಿಮಾನಿ ಸಮಾಜವು ಹೌದು, ಸ್ವಾವಲಂಬಿ ಸಮಾಜವು ಹೌದು. ರಾಜ್ಯಾದ್ಯಂತ ತಮ್ಮ ಕುಲದೇವಿ  ವಾಸವಿ ಮಾತೆಯ ದೇಗುಲಗಳನ್ನು ಅಷ್ಟೇ ಅಲ್ಲದೆ ಶಾಲೆಗಳು, ಕಲ್ಯಾಣ ಮಂದಿರಗಳು, ಸಹಕಾರ ಸಂಘಗಳನ್ನು ಹೊಂದಿದ್ದು ಸದಾಕಾಲ ಕ್ರಿಯಶೀಲವಾಗಿರುತ್ತದೆ ಎಂದು ಸಮಾಜದ ಕಾರ್ಯಚಟುವಟಿಕೆಗಳ ಬಗ್ಗೆ ಮೆಚ್ಚುಗೆ ಮಾತನ್ನಾಡಿ, ವಿವಿದ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಸಾಧಕರನ್ನು ಅಭಿನಂದಿಸಿದರು.

2025ನೇ ಸಾಲಿನ ವಾಸವಿ ಎಕ್ಸಲೆನ್ಸ್ ಪ್ರಶಸ್ತಿ ಪ್ರರಸ್ಕೃತರಿಗೆ ವೇದಿಕೆಯಲ್ಲಿ ಉಪಸ್ಥಿತರಿದ್ದ ಗಣ್ಯರಮಾನ್ಯರು, ಶಾಲು, ಹಾರ, ಪೇಟ, ಫಲ ಪ್ರಶಸ್ತಿ ಪ್ರಧಾನ ಮಾಡಿದರು.

## ಪ್ರಶಸ್ತಿ ಪುರಸ್ಕೃತರು



ಶ್ರೀ ಸತ್ಯಸಾಯಿಬಾಬಾ ಆನೆಗುಂದಿ
ಕೃಷಿ ಕ್ಷೇತ್ರ

**ಕೃಷಿ ಕ್ಷೇತ್ರ :** ಸಮಾರಂಭದಲ್ಲಿ ಮೊದಲಿಗೆ ಧಾರವಾಡ ಜಿಲ್ಲೆಯ ನವಲಗುಂದ ನಗರದ ನಿವಾಸಿಗಳಾದ ಹಾಗೂ ಕೃಷಿ ಕ್ಷೇತ್ರದಲ್ಲಿ ಸ್ವಯಂ ಕೃಷಿಕರಾಗಿ ಮಾಡಿರುವ ಸಾಧನೆಯನ್ನು ಪರಿಗಣಿಸಿ **ಶ್ರೀ ಸತ್ಯ ಸಾಯಿಬಾಬಾ ಆನೆಗುಂದಿ** ರವರಿಗೆ 2025ನೇ ಸಾಲಿನ ವಾಸವಿ ಎಕ್ಸಲೆನ್ಸ್ ಪ್ರಶಸ್ತಿಯನ್ನು ನೀಡಲಾಯಿತು.



ಶ್ರೀ ಎಸ್ ರಮೇಶ್
ವಾಣಿಜ್ಯ ಕ್ಷೇತ್ರ

**ವ್ಯಾಪಾರ ಕ್ಷೇತ್ರ:** ಬಳ್ಳಾರಿ ನಗರದ ರಾಜ್ ಮಹಲ್ ಫ್ಯಾನ್ಸಿ ಜುವೆಲ್ಲರ್ಸ್ ಆಭರಣ ವ್ಯಾಪಾರಿಗಳಾದ **ಶ್ರೀ ಎಸ್ ರಮೇಶ್**ರವರು ವಾಣಿಜ್ಯ ಕ್ಷೇತ್ರದಲ್ಲಿ ಮಾಡಿರುವ ಅದ್ಭುತ ಸಾಧನೆಯನ್ನು ಗುರುತಿಸಿ 2025ನೇ ಸಾಲಿನ ವಾಸವಿ ಎಕ್ಸಲೆನ್ಸ್ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.



ಶ್ರೀ ಶ್ರೀನಾಥ್ ಬೈಸಾನಿ
ಕೈಗಾರಿಕೆ (ತಯಾರಿಕೆ)

**ಕೈಗಾರಿಕಾ ಕ್ಷೇತ್ರ:** ಶ್ರೀ ಶ್ರೀನಾಥ್ ಬೈಸಾನಿ ಎಂಬ ಅಂತರರಾಷ್ಟ್ರೀಯ ಗುಣಮಟ್ಟದ ಕೈಗಾರಿಕೋದ್ಯಮ ಹಾಗೂ ತನ್ನ ಉದ್ಯಮದ ಮೂಲಕ ಸರಿ ಸುಮಾರು 1000 ಉದ್ಯೋಗಗಳನ್ನು ಸೃಷ್ಟಿಸಿ ವರ್ಷಂಪ್ರತಿ ಸುಮಾರು 700ಕೋಟಿಗೂ ಮೀರಿದ ವಹಿವಾಟು ನಡೆಸುತ್ತಿದ್ದು ವೃತ್ತಿಯ ಜೊತೆಗೆ ಸಮಾಜ ಸೇವೆಯನ್ನು ಪ್ರವೃತ್ತಿಯಾಗಿ ಮಾಡಿಕೊಂಡಿರುವ **ಶ್ರೀ ಶ್ರೀನಾಥ್ ಬೈಸಾನಿ**ರವರು ಕೈಗಾರಿಕಾ ಕ್ಷೇತ್ರದಲ್ಲಿ ಸಾಧಿಸಿರುವ ಪ್ರಗತಿಯನ್ನು ಪರಿಗಣಿಸಿ 2025ನೇ ಸಾಲಿನ ವಾಸವಿ ಎಕ್ಸಲೆನ್ಸ್ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು

ಮುಂದುವರೆಯುತ್ತದೆ ಪುಟ 6ಕ್ಕೆ

# 2024-25 ರ ಸಾಲಿನ ಪ್ರತಿಭೆಗಳಿಗೆ ಸಂದ ಗೌರವ 15ನೇ ಪ್ರತಿಭೋತ್ಸವ


15ನೇ ಪ್ರತಿಭೋತ್ಸವ ಕಾರ್ಯಕ್ರಮ ಉದ್ಘಾಟನೆ ಮಾಡುತ್ತಿರುವ ಡಾ॥ ಸಿ ಎನ್ ಮಂಜುನಾಥ್ ಮಾನ್ಯ ಸಂಸದರು, ಬೆಂಗಳೂರು ಗ್ರಾಮಾಂತರ ಹಾಗೂ ಡಾ॥ ಎಸ್ ಸೋಮನಾಥ್ ಮಾಜಿ ಅಧ್ಯಕ್ಷರು, ಇಸ್ರೋ ರವರೊಂದಿಗೆ ಇತರ ಗಣ್ಯರು

ಯಾವುದೇ ವ್ಯಕ್ತಿಯ ಸಂಪೂರ್ಣ ಬೆಳವಣಿಗೆಗೆ ಶಿಕ್ಷಣವು ಅವಶ್ಯಕತೆಯಿದೆ. ಒಂದು ಮಗುವಿನ ಶಾರೀರಿಕ, ಮಾನಸಿಕ ಹಾಗೂ ಅಧ್ಯಾತ್ಮಿಕ ಶಕ್ತಿಗಳನ್ನು ಪೂರ್ಣ ವಿಕಾಸವನ್ನುಂಟು ಮಾಡುವುದೇ ಶಿಕ್ಷಣ. ಒಬ್ಬರ ಜೀವನವನ್ನು ಸರಿಯಾದ ದಿಕ್ಕಿನಲ್ಲಿ ರೂಪಿಸುವ ಸಾಮರ್ಥ್ಯವನ್ನು ಶಿಕ್ಷಣ ಹೊಂದಿದೆ. ಶಿಕ್ಷಣದ ಬೇರುಗಳು ಕಹಿ ಇರಬಹುದು ಆದರೆ ಅದರ ಫಲ ಸಿಹಿಯಾಗಿಯೇ ಇರುತ್ತದೆ ಎಂದು ನೂರಾರು ವರ್ಷಗಳ ಹಿಂದೆಯೇ ಅರಿಸ್ಟಾಟಲ್‌ರಂತಹ ಜ್ಞಾನಿಗಳು ನೀಡಿರುವ ಸಂದೇಶ ಆಚಂದ್ರಾರ್ಕಾವಾಗಿ ಸತ್ಯ ಅಲ್ಲವೇ?

ಶಿಕ್ಷಣವು ಕೇವಲ ಜ್ಞಾನವನ್ನು ಸಂಗ್ರಹಿಸುವುದಲ್ಲ, ಅದು ನಮ್ಮ ಶ್ರೇಷ್ಠತೆಯನ್ನು ತಲುಪುವ ಮಾರ್ಗವಾಗಿದೆ. ವ್ಯಕ್ತಿಯ ವ್ಯಕ್ತಿತ್ವ ರೂಪಿಸುವ, ವ್ಯಕ್ತಿಯ ಭವಿಷ್ಯ ರೂಪಿಸುವ, ದೇಶದ ಅಭಿವೃದ್ಧಿಗೆ ಪೂರಕವಾಗಿರುವ ವಿದ್ಯಾರ್ಥಿಗಳು ಶಿಕ್ಷಣ ಕ್ಷೇತ್ರದಲ್ಲಿ ಮಾಡಿರುವ ಸಾಧನೆಯನ್ನು ಗುರುತಿಸಿ, ಒಂದೆಡೆ ಸೇರಿಸಿ, ಅವರ ಶೈಕ್ಷಣಿಕ ಸಾಧನೆಗಳನ್ನು ಸಂಭ್ರಮಿಸುವ ಸಂಭ್ರಮಾಚರಣೆಯೇ ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ದೂರದೃಷ್ಟಿ ಕಾರ್ಯಕ್ರಮ ಪ್ರತಿಭೋತ್ಸವ. 2010 ರಿಂದ ಪ್ರಾರಂಭವಾದ ಆರ್ಯವೈಶ್ಯ ವಿದ್ಯಾಮಾಣಿಕ್ಯಗಳ ಪ್ರತಿಭೋತ್ಸವ ಸುಮಾರು 350 ವಿದ್ಯಾರ್ಥಿಗಳಿಂದ ಆರಂಭವಾಗಿ ವರ್ಷಗಳು ಕಳೆದಂತೆ ಸರಿಸುಮಾರು 1500 ಪ್ರತಿಭಾವಂತ ವಿಧ್ಯಾರ್ಥಿಗಳು ಪ್ರತಿಭೋತ್ಸವದಲ್ಲಿ ಭಾಗಿಗಳಾಗುತ್ತಿರುವುದು ಶಿಕ್ಷಣ ಕ್ಷೇತ್ರದಲ್ಲಿ ನಮ್ಮ ಸಮಾಜದ ಯುವ ಜನತೆಯ ಶೈಕ್ಷಣಿಕ ಶಕ್ತಿಗೆ ಹಿಡಿದ ಕೈಗನ್ನಡಿಯಾಗಿದೆ.

ಕರ್ನಾಟಕ ರಾಜ್ಯದಲ್ಲಿ ನಮ್ಮ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗೌರವಿಸುವ ಪರಿಯನ್ನು ಇನ್ನಾವುದೇ ಸಮಾಜದಲ್ಲಿ ಕಾಣಸಿಗುವುದಿಲ್ಲ. ಆದರೆ ನಮ್ಮ ವಿದ್ಯಾಮಾಣಿಕ್ಯಗಳಿಗೆ ಅತೀ ವಿಜೃಂಬಣೆಯ ಕಾರ್ಯಕ್ರಮವೂ ಇದೆ, ಹಿರಿಯರ ಮಾರ್ಗದರ್ಶನವೂ ಇದೆ, ಉನ್ನತ ಶಿಕ್ಷಣ ಪಡೆಯಲು ಇಚ್ಚಿಸುವ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಭರವಸೆ, ಸಹಾಯ, ಸಹಕಾರವೂ ಇದೆ. ಪ್ರತಿಭೋತ್ಸವ ಕಾರ್ಯಕ್ರಮಗಳ ಭವಿಷ್ಯದ ನಾಯಕತ್ವಕ್ಕೆ ಭದ್ರವಾದ ಅಡಿಪಾಯವಾಗಿದೆ. ಸಂಘಟನೆಯ ಸದೃಢತೆಗೆ ಪೂರಕವಾದ, ಸಮಾಜ ಅಭಿವೃದ್ಧಿಗೆ ಅವಶ್ಯವಾದ ಮುಂದಿನ ಪೀಳಿಗೆಗೆ ಸ್ಫೂರ್ತಿದಾಯಕವಾದ **2025ರ ಪ್ರತಿಭೋತ್ಸವ ಕಾರ್ಯಕ್ರಮವನ್ನು 16ನೇ ನವೆಂಬರ್ 2025ರಂದು ಬೆಂಗಳೂರು ಮಹಾನಗರದ ಅರಮನೆ ಮೈದಾನದ ಗೇಟ್ ನಂ.9ರಲ್ಲಿರುವ ಪ್ರಿನ್ಸೆಸ್ ಶ್ರೈನ್ ಸಭಾಂಗಣದಲ್ಲಿ** ಅತ್ಯಂತ ಅದ್ದೂರಿಯಾಗಿ ಆಚರಿಸಲಾಯಿತು.

ಹಚ್ಚ ಹಸುರಿನ ಪ್ರಕೃತಿ, ಹೇಮಂತ ಋತುವಿನ ಮೈಕೊರೆಯುವ ಚಳಿ, ಸಾಲದೆಂಬಂತೆ ದಟ್ಟ ಮಂಜಿನ ವಾತಾವರಣ ಇದ್ದರೂ ನಮ್ಮ ವಿದ್ಯಾರ್ಥಿಗಳ ಮತ್ತು ಪೋಷಕರ ಸಂಭ್ರಮದಲ್ಲೇನು ಕೊರತೆ ಇರಲಿಲ್ಲ. ಬೆಳಿಗ್ಗೆ 7–00 ಘಂಟೆಯಿಂದಲೇ ಕಾರ್ಯಕ್ರಮದ ಸ್ಥಳಕ್ಕೆ ಗುಂಪು ಗುಂಪಾಗಿ ಆಗಮಿಸಿದ್ದ ವಿದ್ಯಾರ್ಥಿಗಳು ಸುಂದರ ಪ್ರಕೃತಿಯ ಮಡಿಲಲ್ಲಿ ಭವ್ಯವಾದ ಸಭಾಂಗಣದಲ್ಲಿ ತಾವು ಫೋಟೋಗಳನ್ನು ತೆಗೆಸಿಕೊಳ್ಳುತ್ತಾ, ಇತರರಿಗೂ ಫೋಟೋಗಳನ್ನು ತೆಗೆಯುವ ಮೂಲಕ ಪರಸ್ಪರ ಪರಿಚಯ ವಿನಿಮಯ ಮಾಡಿಕೊಳ್ಳುತ್ತಾ, ಪರಸ್ಪರ ಅಭಿನಂದನೆಗಳನ್ನು ಹಂಚಿಕೊಳ್ಳುತ್ತಿದ್ದದ್ದು ವಿಶೇಷವಾಗಿತ್ತು. 2024–25ರ ಶೈಕ್ಷಣಿಕ ವರ್ಷದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಮೇಲ್ಪಟ್ಟ ಅಂತಿಮ ಪಿಯುಸಿ, ಡಿಗ್ರಿಯ ಪ್ರತಿಭಾವಂತ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು ಆಶ್ಚರ್ಯವೆಂದರೆ ಸರಿಸುಮಾರು 2900ಕ್ಕೂ ಹೆಚ್ಚು ಪ್ರತಿಭಾವಂತ ವಿದ್ಯಾರ್ಥಿಗಳು ಅರ್ಜಿಗಳನ್ನು ಸಲ್ಲಿಸಿದ್ದರೂ ಸಹ, ಅರ್ಜಿಗಳಲ್ಲಿನ ದೋಷಗಳು, ದ್ವಿಪ್ರತಿಗಳನ್ನು ಕಳೆದ ಮೇಲೆ **1370** ವಿದ್ಯಾರ್ಥಿಗಳು ಮಾತ್ರ ಪುರಸ್ಕಾರಗಳನ್ನು ಪಡೆದುಕೊಳ್ಳಲು ಅರ್ಹತೆ ಪಡೆದುಕೊಂಡರು.

15ನೇ ಪ್ರತಿಭೋತ್ಸವದ ಮುಖ್ಯ ಆಹ್ವಾನಿತರನ್ನು ಬೆಳಿಗ್ಗೆ 9–45ಕ್ಕೆ ಆರತಿ ಬೆಳಗಿ, ಪುಷ್ಪವೃಷ್ಟಿ, ವೇದ ಘೋಷಣೆಗಳು ಹಾಗೂ ಸುಮಂಗಲಿಯರ ಪರಿವಾರದೊಂದಿಗೆ, ಜಾನಪದ ಕಲಾ ತಂಡಗಳ ಆಕರ್ಷಕ ನೃತ್ಯದೊಂದಿಗೆ ಅತ್ಯಂತ ಸಾಂಪ್ರಾದಾಯಿಕವಾಗಿ ಅದ್ದೂರಿಯಿಂದ ಸಭಾಂಗಣಕ್ಕೆ ಸ್ವಾಗತಿಸಲಾಯಿತು. ಬೆಳಿಗ್ಗೆ 9–55ಕ್ಕೆ ಸರಿಯಾಗಿ ವೇದಿಕೆ ಕಾರ್ಯಕ್ರಮ ಆರಂಭವಾಗಿ ಆಹ್ವಾನಿತರನ್ನು ವೇದಿಕೆಗೆ ಕರೆತರಲಾಯಿತು. ನಂತರ ವಿದ್ಯಾ ಮಾಣಿಕ್ಯಗಳಲ್ಲಿ ಶ್ರೇಷ್ಠತೆಗಳಿಸಿರುವ ಪಿಹೆಚ್‌ಡಿ, ಬಂಗಾರ ಪದಕ ಪುರಸ್ಕೃತರು, ರ‍್ಯಾಂಕ್ ವಿಜೇತರನ್ನು ಸಹ ಸಭಾಂಗಣದ ಕೊನೆಯ ಭಾಗದಿಂದ ವೇದಿಕೆಗೆ ಸಡಗರ ಸಂಭ್ರಮಗಳಿಂದ ಇಡೀ ಸಭಾಂಗಣವೇ ವಿಸ್ಮಯದಿಂದ ಎದ್ದುನಿಂತು ನೋಡುವಷ್ಟು ಅದ್ದೂರಿಯಾಗಿ ಶ್ರೇಷ್ಠ ವಿದ್ಯಾರ್ಥಿಗಳನ್ನು ವೇದಿಕೆಗೆ ಕರೆತಂದು ವಿಶೇಷ ಆಸನಗಳಲ್ಲಿ ವಿರಾಜಮಾನರನ್ನಾಗಿಸಲಾಯಿತು.

ರಾಷ್ಟ್ರಗೀತೆಯೊಂದಿಗೆ ಆರಂಭವಾದ ಕಾರ್ಯಕ್ರಮದ ಪ್ರಾರಂಭದಲ್ಲಿ ಇತ್ತೀಚೆಗೆ ರಾಷ್ಟ್ರರಾಜಧಾನಿ ಕೆಂಪುಕೋಟೆ ಬಳಿ ಉಗ್ರರ ಅಟ್ಟ ಹಾಸದಿಂದ ತಮ್ಮ ಜೀವ ಕಳೆದುಕೊಂಡ ದೇಶದ 17 ನಾಗರೀಕರ ಆತ್ಮಗಳಿಗೆ ಸದ್ಗತಿ ಕೋರಿ ಸಂತಾಪ ಸೂಚಿಸಲಾಯಿತು. ಅಧ್ಯಕ್ಷರಾದ **ಶ್ರೀ. ರಾ.ಪ. ರವಿಶಂಕರ್**ರವರ ಪ್ರಸ್ತಾವಿಕ ಹಾಗೂ ಸ್ವಾಗತದ ನಂತರ ಅಂತರಿಕ್ಷ ವಿಜ್ಞಾನದಲ್ಲಿ ದೇಶದ ಗೌರವವನ್ನು ವಿಶ್ವಕ್ಕೆ ಪರಿಚಯಿಸಿದ **ಇಸ್ರೋದ ಮಾಜಿ ಅಧ್ಯಕ್ಷರಾದ ಶ್ರೀ. ಸೋಮನಾಥ್**ರವರು 15ನೇ ಪ್ರತಿಭೋತ್ಸವದ ಜ್ಯೋತಿ ಬೆಳಗಿ ಕಾರ್ಯಕ್ರಮಕ್ಕೆ ವಿದ್ಯುಕ್ತ ಚಾಲನೆ ನೀಡಿ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿ ಮೊದಲಿಗೆ ಎಲ್ಲಾ ಪ್ರತಿಭಾಸಂಪನ್ನರಿಗೂ ಅಭಿನಂದನೆಗಳನ್ನು ತಿಳಿಸಿದರು. ಮುಂದುವರೆದು ಇಂದಿನ ಜಾಗತಿಕ ಪ್ರಪಂಚದಲ್ಲಿ ಯುವಜನತೆ ಬೆಳೆಯಲು ಇರುವ ವಿಪುಲ ಅವಕಾಶಗಳ ಬಗ್ಗೆ ತಿಳಿಸಿ ದೇಶಕ್ಕಾಗಿ ಕಾರ್ಯ ನಿರ್ವಹಿಸಲು ಕರೆ ನೀಡಿದರು. ನಂತರ ಮೊದಲನೆಯ ತಂಡದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಶುಭ ಹಾರೈಸಿದರು.

ಆ ನಂತರ ಮಾತನಾಡಿದ ಪ್ರತಿಷ್ಠಿತ ಹೃದಯ ರೋಗ ತಜ್ಞರೂ ಮತ್ತು ಉತ್ಕೃಷ್ಟವಾದ 1000 ಹಾಸಿಗೆ ಸಾಮರ್ಥ್ಯದ ಜಯದೇವ ಹೃದ್ರೋಗ ಸರ್ಕಾರಿ ಆಸ್ಪತ್ರೆಯನ್ನು ಯಾವುದೇ ಖಾಸಗಿ ಆಸ್ಪತ್ರೆಗಳಿಗೆ ಕಡಿಮೆ ಇಲ್ಲದಂತೆ ಕಟ್ಟಿ ಬೆಳೆಸಿ ಅಂದು–ಇಂದು–ಮುಂದೂ ಪ್ರತಿನಿತ್ಯ ಸಾವಿರಾರು ರೋಗಿಗಳ ಸಂಜೀವಿನಿಯಾಗಿ ಬೆಳೆಸಿರುವ ಹಾಗೂ ಬೆಂಗಳೂರು ಗ್ರಾಮಾಂತರದ ಸಂಸದರೂ ಆಗಿರುವ **ಡಾ॥ ಸಿ.ಎನ್. ಮಂಜುನಾಥ್**ರವರು ಮಾತನಾಡಿ ವಿದ್ಯಾರ್ಥಿಗಳಿಗೆ ಅಭಿನಂದನೆಗಳನ್ನು ತಿಳಿಸುತ್ತಾ ಶಿಕ್ಷಣದ ಜೊತೆ ಜೊತೆಗೆ ತಾವು ಜ್ಞಾನವಂತರೂ, ಸಂಸ್ಕಾರವಂತರಾಗಿ ಸದ್ಗುಣಗಳನ್ನು ಮೈಗೂಡಿಸಿಕೊಂಡರೆ ಮಾತ್ರವೇ ಉಜ್ವಲ ಭವಿಷ್ಯ ಸಾಧ್ಯವೆಂಬ ಹತ್ತಾರು ಸಲಹೆಗಳನ್ನೂ, ಬೆಳೆಯಲು ಮಾರ್ಗದರ್ಶನಗಳನ್ನು ನೀಡಿ ಎರಡನೇ ತಂಡದ ವಿದ್ಯಾರ್ಥಿಗಳನ್ನು ಅಭಿನಂದಿಸಿ ಶುಭ ಹಾರೈಸಿದರು. ತುಮಕೂರು ವಿಶ್ವ ವಿದ್ಯಾಲಯದ ಕುಲಪತಿಗಳಾದ **ಪ್ರೋಫೆಸರ್ ವೆಂಕಟೇಶ್ವರಲು**ರವರು ಹಾಗೂ ವಿಧಾನ ಪರಿಷತ್ತಿನ **ಶಾಸಕರಾದ ಶ್ರೀ. ಡಿ.ಎಸ್. ಅರುಣ್**ರವರು ಮಾತನಾಡಿ ಸಮಾಜದ ಅಭ್ಯುದಯಕ್ಕಾಗಿ ಮತ್ತು ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ಮಹಾಸಭೆ ಮಾಡುತ್ತಿರುವ ಕೆಲಸ ಕಾರ್ಯಗಳ ಬಗ್ಗೆ ಶ್ಲಾಘಿಸಿ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದ್ದಲ್ಲದೆ, ಅವಕಾಶಗಳ ಸದ್ಬಳಕೆ ಮಾಡಿಕೊಂಡು ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಕರೆ ನೀಡಿ ಕೆಲವು ವಿದ್ಯಾರ್ಥಿ ತಂಡಗಳನ್ನು ಅಭಿನಂದಿಸಿ ಶುಭಹಾರೈಸಿದರು. ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದ ಶ್ರೀ ಕೆ ವಿ ರಾಂಪ್ರಸಾದ್ ಅಧ್ಯಕ್ಷರು, ಕರ್ನಾಟಕ ಆರ್ಯವೈಶ್ಯ ಅಭಿವೃದ್ಧಿ ನಿಗಮ, ಅಖಿಲ ಕರ್ನಾಟಕ ಆರ್ಯವೈಶ್ಯ ಮಹಿಳಾ ಮಹಾಸಭೆ ಅಧ್ಯಕ್ಷರಾದ **ಶ್ರೀಮತಿ. ಉಮಾ ಸಾಯಿರಾಂ,** ಯುವಜನ ಮಹಾಸಭೆ ಅಧ್ಯಕ್ಷರಾದ **ಶ್ರೀ. ಸುನಿಲ್,** ಬೆಂಗಳೂರು ಆರ್ಯವೈಶ್ಯ ಮಂಡಳಿಗಳ ಒಕ್ಕೂಟದ ಅಧ್ಯಕ್ಷರಾದ **ಶ್ರೀ. ನಾಗಮಹೇಶ್**ರವರುಗಳು ಮಾತನಾಡಿ ವಿದ್ಯಾರ್ಥಿಗಳಿಗೆ ಶುಭಕೋರಿ ಅಭಿನಂದಿಸಿದರು. ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ಗುಪ್ತಾ ಎಜುಕೇಷನ್ ಸೊಸೈಟಿ ಅಧ್ಯಕ್ಷರಾದ ಶ್ರೀ. ಶ್ಯಾಮಸುಂದರ್ ಗುಪ್ತಾ ಶ್ರೀಮತಿ. ಇಂದಿರಾ ಗುಪ್ತಾ, ಅಂತರ ರಾಷ್ಟ್ರೀಯ ವೈಶ್ಯ ಸಂಸ್ಥೆಯ ಕಾರ್ಯಾಧ್ಯಕ್ಷರಾದ ಶ್ರೀ. ಬಿಪಿನ್ ರಾಮ್ ಅಗರ್‌ವಾಲ್, ಯುವ ಅಧ್ಯಕ್ಷರಾದ ಶ್ರೀ. ಬ್ರಿಜೇಶ್ ಅಗರ್‌ವಾಲ್, ಬೆಂಗಳೂರು ನಗರದ ಅಧ್ಯಕ್ಷರಾದ ಶ್ರೀ ಲಲಿತ್ ಡಾಕ್‌ಲಿಯಾ, ವಿಶ್ವ ಹಿಂದೂ ಪರಿಷತ್ತಿನ ರಾಜ್ಯಾಧ್ಯಕ್ಷರಾಗಿ, ಹಿಂದೂ ಸಮಾಜದ ಸರ್ವಾಂಗೀಣ ಅಭಿವೃದ್ಧಿಗೆ ಕಾರ್ಯ ನಿರ್ವಹಿಸುತ್ತಿರುವ ಶ್ರೀ. ದೀಪಕ್ ರಾಜ್‌ಗೋಪಾಲ್, ದೇಶದ ಸರ್ವೋಚ್ಚ ನ್ಯಾಯಾಲಯದ ನ್ಯಾಯವಾದಿಗಳಾಗಿರುವ ಶ್ರೀ. ಕೆ.ಆರ್. ಪ್ರದೀಪ್, ಅಖಿಲ ಭಾರತ ವಾಸವಿ ಪೆನುಗೊಂಡ ಕ್ಷೇತ್ರದ ಅಧ್ಯಕ್ಷರಾದ ಡಾ॥ ಪಿ.ಎನ್.ಗೋವಿಂದರಾಜುಲುರವರುಗಳು ಸಹ ವೇದಿಕೆಗೆ ಆಗಮಿಸಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಸಭೆಯ ಗೌರವವನ್ನು ಹೆಚ್ಚಿಸಿದರು.


ಮುಖ್ಯ ಅತಿಥಿಗಳಿಂದ ಗೌರವ ಸ್ವೀಕರಿಸಿದ ವಿದ್ಯಾಮಾಣಿಕ್ಯಗಳು

### 15ನೇ ಪ್ರತಿಭೋತ್ಸವದಲ್ಲಿ ಗೌರವಸ್ವೀಕರಿಸಿದ ವಿದ್ಯಾರ್ಥಿಗಳ ವಿವರ ಇಂತಿದೆ


**ಈ ಕಾರ್ಯಕ್ರಮದಲ್ಲಿ ಶೇ. 90ಕ್ಕಿಂತಲೂ ಹೆಚ್ಚು ಅಂಕಪಡೆದಿರುವ 314 ಎಸ್ ಎಸ್ ಎಲ್ ಸಿ, 427 ಪಿಯುಸಿ ವಿದ್ಯಾರ್ಥಿಗಳು, ಡಿಪ್ಲಮೊ ಮತ್ತು ಪದಿವಿ 493, ಸ್ನಾತಕೋತ್ತರ 90, ವೃತ್ತಿಪರ ಡಿಗ್ರಿ 40, ಪಿ ಹೆಚ್ ಡಿ 20, ವಿದ್ಯಾರ್ಥಿಗಳನ್ನು ಸಹಸ್ರಾರು ನಾಗರೀಕರ ಸಮ್ಮುಖದಲ್ಲಿ ಅಭಿನಂದಿಸಲಾಗುತ್ತದೆ.**

ಅರಮನೆ ಮೈದಾನದಲ್ಲಿ ನಮ್ಮ ನಿರೀಕ್ಷೆಗೂ ಮೀರಿ ಜನಸಾಗರ ರಾಜ್ಯದೆಲ್ಲೆಡೆಯಿಂದ ಆಗಮಿಸಿದ್ದರೂ ಸಹ ನಮ್ಮ ವೈಶ್ಯ ಹಾಸ್ಟೆಲ್, MAVS ಹಾಸ್ಟೆಲ್ ವಿದ್ಯಾರ್ಥಿಗಳ ಸಕಾಲಿಕ ನಿರ್ವಹಣೆ ಮತ್ತು ರೇಗಂಟಿ ವಾಸವಿ ಕೇಟರಿಂಗ್ ತಂಡ ಹಾಗೂ ಭೋಜನ ಶಾಲೆಯ ಮೇಲ್ವಿಚಾರಕರಾದ ಶ್ರೀ ಕೃಷ್ಣಮೂರ್ತಿಯವರ ಸಹಕಾರದಿಂದ ಕಾರ್ಯಕ್ರಮಗಳು ಸರಾಗವಾಗಿ ಸರ್ವರ ಮೆಚ್ಚುಗೆಗೆ ಪಾತ್ರವಾಗಿ 15ನೇ ಪ್ರತಿಭೋತ್ಸವ ಸಂಪನ್ನವಾಯಿತು.


ಪ್ರತಿಭಾ ಪುರಸ್ಕೃತರು ಹಾಗೂ ಬೃಹತ್ ಸಂಖ್ಯೆಯಲ್ಲಿ ಆಗಮಿಸಿರುವ ಕುಲಬಾಂಧವರು

ವರದಿ
**ಹೆಚ್ ಜಿ ಹನುಮಂತಯ್ಯ ಪ್ರಧಾನ ಕಾರ್ಯದರ್ಶಿ**

ಮನುಷ್ಯರನ್ನು ಭೂಮಿಯಲ್ಲೆಡೆ ಕಾಣಬಹುದು, **ಆದರೇ ಮನುಷ್ಯತ್ವನ್ನು ಕೆಲವೇ ಜನಗಳಲ್ಲಿ ಕಾಣಲು ಸಾಧ್ಯ ಅಂತಹ ಮಾನವೀಯ ಗುಣಸಂಪನ್ನರು ಶ್ರೀ ಕೆ ಜಿ ಸುಬ್ಬರಾಮ ಸೆಟ್ಟಿ.** ಶ್ರೀಯುತರು ಉದ್ಯಮಿಯೂ ಹೌದು, ಉದಾತ್ತ ಮನೋಭಾವದವರು ಹೌದು, ಸಿರಿವಂತರು ಹೌದು, ಹೃದಯ ಶ್ರೀಮಂತರು ಹೌದು, ದೇಶಾಭಿಮಾನಿಯೂ ಹೌದು–ರಾಷ್ಟ್ರ ಸೇವಕರು ಹೌದು. ಇವರು ಕೇವಲ ಸಾಧಕರಲ್ಲ ಭವಿಷ್ಯದ ಪೀಳಿಗೆ ನಿರಂತರ ನೆನೆಯುವಂತಹ ಆದರ್ಶ ಸಾಧಕರು ಕ್ರೀಡಾಪಟುವೂ–ಕ್ರೀಡಾಭಿಮಾನಿಯೂ ಅಗಿದ್ದೂ ಸರಿ ಸುಮಾರು ತಮ್ಮ 89ನೇ ವಯಸ್ಸಿನವರೆವಿಗೂ ಪ್ರತಿನಿತ್ಯ ಟೆನ್ನೀಸ್ ಆಟವನ್ನು ಆಡುವ ಅವರ ಶೈಲಿ ಯುವಕರನ್ನು ನಾಚಿಸುವಂತಿತ್ತು. ಕೈಗಾರಿಕೋದ್ಯಮಿಯಾಗಿ ಸಾವಿರಾರು ಉದ್ಯೋಗಗಳನ್ನು ಸೃಷ್ಟಿ ಮಾಡಿದ ಉದ್ಯೋಗಧಾತರು, ಸಾಮಾಜಿಕವಾಗಿ, ಶಿಕ್ಷಣ, ಆರೋಗ್ಯ ಕ್ಷೇತ್ರಗಳಲ್ಲಿ ಅತ್ಯುತ್ತಮ ಸೇವೆಯನ್ನು ಸಲ್ಲಿಸಿದ ಶ್ರೀಯುತರು **2022ರ ರಾಜ್ಯೋತ್ಸವ ಪ್ರಶಸ್ತಿ, 2018ರ ಕೆಂಪೇಗೌಡ ಪ್ರಶಸ್ತಿಗೆ**




**ಶ್ರೀ ಕೆ ಜಿ ಸುಬ್ಬರಾಮ ಸೆಟ್ಟಿ**

ಭಾಜನರಾಗಿರುತ್ತಾರೆ. ಆರ್ ವಿ ಶಿಕ್ಷಣ ಸಂಸ್ಥೆ, ಜನಸೇವಾ ವಿದ್ಯಾಕೇಂದ್ರ ಹಾಗೂ ಹತ್ತು ಹಲವು ಸೇವಾ ಸಂಸ್ಥೆಗಳ ಪದಾಧಿಕಾರಿಯಾಗಿ, ಮಾರ್ಗದರ್ಶಕರಾಗಿ ಕಾರ್ಯ ನಿರ್ವಹಿಸಿದ್ದಾರೆ, ನಿರ್ವಹಿಸುತ್ತಿದ್ದಾರೆ. ರಾಷ್ಟ್ರೀಯ ಸ್ವಯಂ ಸೇವಾ ಸಂಘದ ಅಚ್ಚುಮೆಚ್ಚಿನ ಕಾರ್ಯಕರ್ತರಾಗಿ ಸಂಘದ ಸೇವಾ ಚಟುವಟಿಕೆಗಳ ಬೆನ್ನೆಲುಬಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಶ್ರೀ ಸುಬ್ಬರಾಮ ಶೆಟ್ಟಿಯವರು ಒಬ್ಬ ವ್ಯಕ್ತಿಯಲ್ಲ ಒಂದು ಸಂಘವೇ ಆಗಿರುತ್ತಾರೆ. ಸಮಾಜದ ಎಲ್ಲಾ ರಂಗಗಳಲ್ಲಿಯೂ ಶಿಸ್ತುಬದ್ಧವಾಗಿ ಕಾರ್ಯನಿರ್ವಹಿಸಿ ನಾಗರೀಕ ಸಮುದಾಯದ ಸರ್ವಾಂಗೀಣ ಅಭಿವೃದ್ಧಿಗೆ ಕಾಯ–ವಾಚಾ–ಮನಸಾ ಕಾರ್ಯನಿರ್ವಹಿಸಿರುವ ಪರಿಪೂರ್ಣ ವ್ಯಕ್ತಿತ್ವದ ಪ್ರತಿಷ್ಠಿತ ವ್ಯಕ್ತಿಗೆ ಕರ್ನಾಟಕ ಆರ್ಯವೈಶ್ಯ ಮಹಾಸಭೆ ಏಷ್ಯಾನೆಟ್ ಸುವರ್ಣ ವಾಹಿನಿ ಮತ್ತು ಕನ್ನಡಪ್ರಭ ಸಹಯೋಗದೊಂದಿಗೆ ಕೊಡ ಮಾಡುವ ಜೀವಮಾನ ಸಾಧನ ಪ್ರಶಸ್ತಿ ಕೊಟ್ಟು ಗೌರವಿಸಲಾಗಿದೆ.



ಭರತ್ ಜಟಂಗಿ & ಶಶಾಂಕ್. ಪಿ.
ಪೇಸ್ ವಿಸ್ಡಂ ಸೊಲ್ಯೂಷನ್ಸ್ ಪ್ರೈ ಲಿ.
ಸೇವಾ ಉದ್ಯಮ

**ಸೇವಾ ಉದ್ಯಮ:** ವಿದ್ಯಾರ್ಥಿ ದೆಸೆಯಿಂದಲೂ ಜೊತೆಗೂಡಿ ಬೆಳೆದ 6 ಜನ ಸ್ನೇಹಿತರು ಪೇಸ್ ವಿಸ್ಡಂ ಎಂಬ ತಂತ್ರಜ್ಞಾನ ಸಂಸ್ಥೆಯನ್ನು ಪ್ರಾರಂಭಿಸಿ ಹಂತ–ಹಂತವಾಗಿ ಬೆಳೆದು ಕೇವಲ 12ವರ್ಷಗಳಲ್ಲಿ ತಂತ್ರಜ್ಞಾನ ಕ್ಷೇತ್ರದಲ್ಲಿ ತಮ್ಮ ಪರಿಣಿತಿಯನ್ನು ಸಾದರ ಪಡಿಸಿದರು. ಅದರಲ್ಲೂ ಎ ಐ ತಂತ್ರಜ್ಞಾನದಲ್ಲಿ ಹೊಸ ಆವಿಷ್ಕಾರದ ಉತ್ಪನ್ನಗಳಿಂದ ಸರಿಸುಮಾರು 100 ಮಿಲಿಯನ್ನ ಜನಗಳನ್ನು ಸಂಪರ್ಕ ಮಾಡಿರುವ ಹೆಗ್ಗಳಿಕೆ ಇವರದ್ದಾಗಿದೆ. ಇಷ್ಟಲ್ಲದೆ, ದೇಶ–ವಿದೇಶಗಳಲ್ಲಿ ನಡೆದಿರುವ ಹತ್ತು–ಹಲವು ಟೆಕ್ ಶೃಂಗ ಸಭೆಗಳಲ್ಲಿ ಸಂಪೂರ್ಣ ತಾಂತ್ರಿಕತೆಯ ಜವಬ್ದಾರಿಯನ್ನು ವಹಿಸಿ ಯಶಸ್ವಿಯಾಗಿ ತಂತ್ರಜ್ಞಾನ ಕ್ಷೇತ್ರದಲ್ಲಿ ಖ್ಯಾತಿಯನ್ನು ಪಡೆದಿರುತ್ತಾರೆ. ಇವರ ಸಾಧನೆಯನ್ನು ಮೆಚ್ಚಿ ಸಂಸ್ಥೆಯ ಸ್ಥಾಪಕರಲ್ಲಿ ಪ್ರಮುಖರಾದ ನಮ್ಮ ಸಮಾಜದ **ಶ್ರೀ ಭರತ್ ಜಟಂಗಿ ಮತ್ತು ಶ್ರೀ ಶಶಾಂಕ್**ರವರ ಸಾಧನೆಯನ್ನು ಗುರುತಿಸಿ 2025ನೇ ಸಾಲಿನ ವಾಸವಿ ಎಕ್ಸಲೆನ್ಸ್ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು

ವಾಸವಿ ವಿದ್ಯಾಪೀಠ
ಮಾಗಡಿ
ಶಿಕ್ಷಣ ಕ್ಷೇತ್ರ

**ಶಿಕ್ಷಣ ಕ್ಷೇತ್ರ:** ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ಮಾಗಡಿ ನಗರದಲ್ಲಿ 1989ರಲ್ಲಿ ಕೇವಲ 30 ವಿದ್ಯಾರ್ಥಿಗಳಿಂದ ಆರಂಭವಾದ ಶ್ರೀ ವಾಸವಿ ವಿದ್ಯಾಪೀಠ ಇಂದು ಮೌಲ್ಯಧಾರಿತವಾದ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಾ ಬಂದಿದೆ. ತನ್ನ ಶಾಲೆಯ ವಿದ್ಯಾರ್ಥಿಗಳನ್ನು ಕೇವಲ ಪಠ್ಯ–ಪುಸ್ತಕಗಳಿಗೆ ಸೀಮಿತಗೊಳಿಸದೆ, ಕ್ರೀಡೆ, ಅದರಲ್ಲೂ ಸಾಹಸ ಕ್ರೀಡೆಗಳಲ್ಲಿ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಮಕ್ಕಳನ್ನು ತೊಡಗಿಸಿ ಅವರಲ್ಲಿರುವ ಪ್ರತಿಭೆಯನ್ನು ಓರೆ ಹಚ್ಚಿ ತೆಗೆದು ನಾಡಿಗೆ ಪರಿಚಯಿಸುತ್ತಿದೆ. ಆರಂಭದಿಂದ ಇಂದಿನವರೆವಿಗೂ ಎಸ್ಎಸ್ಎಲ್ಸಿ ಪರೀಕ್ಷೆಗಳಲ್ಲಿ ಶೇಕಡ 100 ರಷ್ಟು ಫಲಿತಾಂಶ ಪಡೆಯುತ್ತಾ ಬಂದಿರುವ ಈ ಶಾಲೆಯು ತನ್ನ ಗುಣಮಟ್ಟದ ಶಿಕ್ಷಣದ ಮೂಲಕ ದೇಶ ಕಟ್ಟುವ ಯುವ ಸೇನಾನಿಗಳನ್ನು ಸಿದ್ದಪಡಿಸುತ್ತಿದೆ. ಗ್ರಾಮಾಂತರ ಜಿಲ್ಲೆಗಳಲ್ಲಿ ಶಿಕ್ಷಣ ಕ್ರಾಂತಿ ಮೂಡಿಸಿರುವ ಶ್ರೀ ವಾಸವಿ ವಿದ್ಯಾಪೀಠ, ಮಾಗಡಿ, ಇದರ ಸೇವೆ ಗುರುತಿಸಿ 2025ರ ವಾಸವಿ ಎಕ್ಸಲೆನ್ಸ್ ಪ್ರಶಸ್ತಿ ನೀಡಿ ಗೌರವಿಸಿದೆ.



ಶ್ರೀ ಅಂಜನ್ ಶೆಟ್ಟಿ
ಸಮೂಹ ಮಾಧ್ಯಮ

**ಸಮೂಹ ಮಾಧ್ಯಮ:**
ಕನ್ನಡ ಪತ್ರಿಕೋದ್ಯಮದ ಮುಖ್ಯ ವಾಹಿನಿಯಲ್ಲಿ ಕಾರ್ಯನಿರ್ವಹಿಸಿದ ಕೆಲವೇ ಆರ್ಯವೈಶ್ಯ ರಲ್ಲಿ **ಶ್ರೀ ಅಂಜನ್ ಶೆಟ್ಟಿರವರು** ಒಬ್ಬರು. ವಿದ್ಯಾರ್ಥಿ ದೆಸೆಯಿಂದಲು ಸಾಹಿತ್ಯ ಮತ್ತು ಪತ್ರಿಕೋದ್ಯಮಗಳತ್ತ ಒಲವು, ಪತ್ರಿಕೋದ್ಯಮ ಕ್ಷೇತ್ರದ ಕೆಲವು ದಿಗ್ಗಜರೊಂದಿಗೆ ಕಾರ್ಯನಿರ್ವಹಿಸಿ ನಂತರ ಸುಮಾರು 17 ವರ್ಷಗಳ ಕಾಲ ಚಿರಂತನ ವೈಶ್ಯ ಪ್ರಭ ಎಂಬ ಪಾಕ್ಷಿಕ ಪತ್ರಿಕೆಯನ್ನು ನಡೆಸಿದ್ದಲ್ಲದೆ, ಹತ್ತು ಹಲವು ಪತ್ರಿಕೆಗಳ ಸಂಪಾದಕರಾಗಿ ಕಾರ್ಯನಿರ್ವಹಿಸಿ ಪತ್ರಿಕೋದ್ಯಮ ಅಪಾರ ಅನುಭವ ಹೊಂದಿರುವ ಶ್ರೀ ಅಂಜನ್ ಶೆಟ್ಟಿಯವರಿಗೆ 2025ನೇ ಸಾಲಿನ ವಾಸವಿ ಎಕ್ಸಲೆನ್ಸ್ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು

ಶ್ರೀ ವಾಸವಾಂಬ ಕೋ ಆಪರೇಟಿವ್ ಬ್ಯಾಂಕ್ ಹೊಳೆನರಸೀಪುರ
ಸಹಕಾರ ಕ್ಷೇತ್ರ

**ಸಹಕಾರ ಕ್ಷೇತ್ರ:** ಭಾರತ ದೇಶದಲ್ಲಿ ಸಹಕಾರ ಕ್ರಾಂತಿ ಆರಂಭದ ಹೊಸ್ತಿಲಲ್ಲಿ ಸ್ವಾತಂತ್ರ ಪೂರ್ವದಲ್ಲಿಯೇ ಹಾಸನ ಜಿಲ್ಲೆಯ ಹೊಳೆನರಸೀಪುರದಲ್ಲಿ ಆರಂಭವಾದ ಶ್ರೀವಾಸವಾಂಬ ಕೋ ಆಪರೇಟಿವ್ ಬ್ಯಾಂಕ್ ನಿ., ಸಹಕಾರ ಕ್ಷೇತ್ರದಲ್ಲಿ ಕಳೆದ 118 ವರ್ಷಗಳಿಂದ ಕಾರ್ಯನಿರ್ವಹಿಸುತ್ತಾ ಸಹಸ್ರಾರು ಸದಸ್ಯರ ಆರ್ಥಿಕಾಭಿವೃದ್ಧಿಗೆ ಬೆನ್ನೆಲುಬಾಗಿದೆ. ತನ್ನ 118 ವರ್ಷಗಳ ಕಾರ್ಯಾವಧಿಯಲ್ಲಿ ಅತ್ಯುತ್ತಮವಾಗಿ ಸೇವೆ ಸಲ್ಲಿಸಿಕೊಂಡು ಬಂದಿರುವ ಶ್ರೀ ವಾಸವಾಂಬ ಕೋ ಆಪರೇಟಿವ್ ಬ್ಯಾಂಕ್ ನಿ., ಆರಂಭದಿಂದ ಇಂದಿನವರೆವಿಗೂ ಶೂನ್ಯ ಎನ್‌ಪಿಎ ಹೊಂದಿದೆ. ಗ್ರಾಮಾಂತರ ಜಿಲ್ಲೆಯ ತನ್ನ ಗ್ರಾಹಕರಿಗೂ ಆಧುನಿಕ ಬ್ಯಾಂಕಿಂಗ್ ಸೌಲಭ್ಯಗಳನ್ನು ವಿಸ್ತರಿಸಿರುವ ಬ್ಯಾಂಕ್ ಕಳೆದ ಮೂರು ವರ್ಷಗಳಿಂದಲೂ ತನ್ನ ಸದಸ್ಯರಿಗೆ ಶೇಕಡ 20ರಷ್ಟು ಲಾಭಾಂಶವನ್ನು ವಿತರಿಸಿದ ಹೆಗ್ಗಳಿಕೆಗೆ ಪಾತ್ರವಾಗಿದೆ. 2024–25ರ ಸಾಲಿನಲ್ಲಿ ರೂ.2,300 ಕೋಟಿಗಳಿಗೂ ಅಧಿಕ ವಹಿವಾಟು ನಡೆಸಿರುವ ಬ್ಯಾಂಕು ಇದಾಗಿದ್ದು 2023ರಲ್ಲಿ ದೇಶದ ಕೇಂದ್ರದ ಸಹಕಾರ ಸಚಿವರಿಂದಲೂ ಅಭಿನಂದನಾ ಪ್ರಶಸ್ತಿ ಪಡೆದ ಗೌರವಕ್ಕೆ ಪಾತ್ರವಾಗಿದೆ. ಬ್ಯಾಂಕಿಂಗ್ ಕ್ಷೇತ್ರದಲ್ಲಿ 118 ವರ್ಷಗಳಿಂದ ನಿರಂತರ ಸೇವೆಯನ್ನು ಸಲ್ಲಿಸುತ್ತಾ ಸಾವಿರಾರು ಗ್ರಾಹಕರ ಆರ್ಥಿಕಾಭಿವೃದ್ಧಿಯ ಶಕ್ತಿಯಾಗಿರುವ ಹೊಳೆನರಸೀಪುರ ಶ್ರೀ ವಾಸವಾಂಬ ಕೋ ಆಪರೇಟಿವ್ ಬ್ಯಾಂಕ್ ನಿ., 2025ರ ವಾಸವಿ ಎಕ್ಸಲೆನ್ಸ್ ಪ್ರಶಸ್ತಿಗೆ ಭಾಜನವಾಗಿದೆ.



ಪ್ರೊ. ಡಾ. ಆರ್ ಕಿಶೋರ್ ಕುಮಾರ್
ವೃತ್ತಿಪರ ಕ್ಷೇತ್ರ

**ವೃತ್ತಿಪರ ಕ್ಷೇತ್ರ:** ಮೈಸೂರು ನಗರದಲ್ಲಿ ತಮ್ಮ ವೈದ್ಯಕೀಯ ಶಿಕ್ಷಣ ಮುಗಿಸಿ ನಂತರ ಇಂಗ್ಲೆಂಡ್, ಅಮೇರಿಕಾ, ಆಸ್ಟ್ರೇಲಿಯಾ ದೇಶಗಳಲ್ಲಿ ನವಜಾತ ಶಿಶು ಆರೈಕೆ ವಿಷಯದಲ್ಲಿ ಉನ್ನತ ಶಿಕ್ಷಣ ಮುಗಿಸಿದ ಡಾ॥ ಆರ್.ಕಿಶೋರ್ ಕುಮಾರ್‌ರವರು ತಮ್ಮ 30ನೇ ವಯಸ್ಸಿನಲ್ಲಿಯೇ ನವಜಾತ ಶಿಶು ಆರೈಕೆ ವಿಷಯದಲ್ಲಿ ವಿಶ್ವದಲ್ಲಿ ಅತೀ ಹೆಚ್ಚು ಜ್ಞಾನಾರ್ಜನೆ ಪಡೆದಿರುವ ವ್ಯಕ್ತಿಯೆಂದು **ಅಮೇರಿಕಾ ದೇಶದ ಅಂದಿನ ಅಧ್ಯಕ್ಷರಾಗಿದ್ದ ಶ್ರೀ ಬಿಲ್‌ಕ್ಲಿಂಟನ್‌ರವರಿಂದ ಗೌರವಕ್ಕೆ ಪಾತ್ರರಾಗಿದ್ದಾರೆ. ನವಜಾತ ಶಿಶು ಆರೈಕೆ ವಿಭಾಗದಲ್ಲಿ ವಿಶ್ವದ ಪ್ರತಿಷ್ಠಿತ ವೈದ್ಯರಲ್ಲಿ ಡಾ॥ ಆರ್.ಕಿಶೋರ್ ಕುಮಾರ್‌ರವರು ಸಹ ಒಬ್ಬರಾಗಿದ್ದಾರೆ.**

ವಿದೇಶಗಳಲ್ಲಿ ನಿರಂತರ 18 ವರ್ಷಗಳ ನವಜಾತ ಶಿಶು ಆರೈಕೆಯಲ್ಲಿ ಅಪಾರ ಅನುಭವಗಳಿಸಿ ತಾಯ್ನಾಡಿಗೆ ಮರಳಿ **ಕ್ಲೌಡ್ ನೈನ್ ಗ್ರೂಪ್ ಆಫ್ ಹಾಸ್ಪಿಟಲ್ಸ್** ಸಂಸ್ಥೆಯನ್ನು ಆರಂಭಿಸಿದರು. ಅತ್ಯಂತ ಅಲ್ಪಾವಧಿಯಲ್ಲಿಯೇ ಸರಿ ಸುಮಾರು 40ಕ್ಕೂ ಹೆಚ್ಚು ಕ್ಲೌಡ್ ನೈನ್ ಆಸ್ಪತ್ರೆಗಳನ್ನು ಆರಂಭಿಸಿ ವಿಶ್ವ ದರ್ಜೆ ಗುಣಮಟ್ಟದ ಚಿಕಿತ್ಸೆಗಳ ಮೂಲಕ ದೇಶದ ಅತ್ಯುತ್ತಮ ಹೆರಿಗೆ ಆಸ್ಪತ್ರೆಗಳಲ್ಲಿ ಒಂದಾಗಿದ್ದು 3 ಲಕ್ಷಕ್ಕೂ ಮೀರಿದ ಆರೋಗ್ಯವಂತ ಶಿಶುಗಳ ಜನ್ಮಸ್ಥಳವಾಗಿರುವ ಕ್ಲೌಡ್ ನೈನ್ ಲಕ್ಷಾಂತರ ತಾಯಂದಿರ ನೆಚ್ಚಿನ ಮಕ್ಕಳ ಆಸ್ಪತ್ರೆ ಎಂದರೇ ಅತಿಶಯೋಕ್ತಿ ಆಗಲಾರದು. ವಿಶ್ವ ದರ್ಜೆಯ ಗುಣಮಟ್ಟದ ಆಸ್ಪತ್ರೆಗಳ ಮೂಲಕ ಆರೋಗ್ಯ ಕ್ಷೇತ್ರದಲ್ಲಿ ಜಾಗತಿಕ ಮನ್ನಣೆ ಗಳಿಸಿರುವ ಡಾ॥ ಆರ್.ಕಿಶೋರ್‌ರವರಿಗೆ ದೇಶ ವಿದೇಶಗಳಲ್ಲಿ ಸಂದಿರುವ ಪ್ರತಿಷ್ಠಿತ ಪ್ರಶಸ್ತಿಗಳು ಹತ್ತಾರು, ವೈದ್ಯಕೀಯ ಕ್ಷೇತ್ರದಲ್ಲಿ ಅನುಪಮ ಸೇವೆಸಲ್ಲಿಸಿರುವ **ಅಂತರರಾಷ್ಟ್ರೀಯ ಖ್ಯಾತಿವೆತ್ತ ಡಾ॥ ಆರ್.ಕಿಶೋರ್‌ರವರಿಗೆ** 2025ರ ಎಕ್ಸಲೆನ್ಸ್ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

ಮುಂದುವರೆಯುತ್ತದೆ ಪುಟ 7 ಕ್ಕೆ



ಡಾ. ಸ್ವಾತಿ ಪ್ರದೀಪ್ ಬಿ ಜಿ
ಯುವ ಉದ್ಯಮಿ

**ಯುವ ಉದ್ಯಮಿ:** ಸಾಧನೆ ಮಾಡುವ ಹಂಬಲವಿದ್ದರೆ ಅದಕ್ಕೆ ನಗರ, ಪಟ್ಟಣ, ಗ್ರಾಮ ಎಂಬ ಯಾವುದೇ ಪ್ರದೇಶದ ಮಿತಿ ಇಲ್ಲ, ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೋಕಿನವರಾದ ಶ್ರೀಮತಿ ಸ್ವಾತಿ ಪ್ರದೀಪ್, ತನ್ನ **ಊರಿನ ಹೆಣ್ಣು ಮಕ್ಕಳು ಉದ್ಯೋಗವನ್ನರಿಸಿ ಊರು ಬಿಟ್ಟು ಹೊರ ಊರುಗಳಿಗೆ ವಲಸೆ ಹೋಗುತ್ತಿರುವುದನ್ನು ಕಂಡು, ತಮ್ಮ ಊರಿನ ಶ್ರಮಿಕ ಶಕ್ತಿಗೆ, ಸ್ವಂತ ಊರಿನಲ್ಲಿಯೇ ಉದ್ಯೋಗ ನೀಡಿ ಅವರ ಸ್ವಾಭಿಮಾನದ ಜೀವನಕ್ಕೆ ಸಂಕಲ್ಪ ಮಾಡಿದರು.** ಆಯುರ್ವೇದ ವೈದ್ಯ ಉದ್ಯೋಗಕ್ಕೆ ರಾಜೀನಾಮೆ ನೀಡಿ ತಮ್ಮ ಪತಿ ಶ್ರೀ ಪ್ರದೀಪ್‌ರವರ ಸಹಕಾರದಿಂದ **ಸದ್ಗುರು ಆಯುರ್ವೇದ** ಎಂಬ ಹೆಸರಿನಲ್ಲಿ ಆಯುರ್ವೇದ ಗಿಡ ಮೂಲಿಕೆಗಳಿಂದ ನಾನಾ ಬಗೆಯ ಸೋಪುಗಳು, ಹಾಗೂ ಇನ್ನು ಹತ್ತಾರು ಬಗೆ ಬಗೆಯ ಉತ್ಪನ್ನಗಳ ತಯಾರಿಕೆಯಲ್ಲಿ ತೊಡಗಿಸಿಕೊಂಡರು. ದಿನೇ ದಿನೇ ವ್ಯಾಪಾರವನ್ನು ಅಭಿವೃದ್ಧಿಪಡಿಸುತ್ತಾ ಪ್ರಸ್ತುತ ಆರು ರಾಜ್ಯಗಳಲ್ಲಿ 650ಕ್ಕೂ ಮೀರಿದ ವಿತರಕರನ್ನು ಹೊಂದಿದ್ದು ನೂರಾರು ಕೋಟಿ ವ್ಯವಹಾರದೊಂದಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಾವಿರಾರು ಉದ್ಯೋಗಗಳನ್ನು ಸೃಷ್ಟಿಸಿದ್ದಾರೆ. ತನ್ನ ಊರಿನ ಜನತೆಗೆ ಮತ್ತಷ್ಟು ಸೇವೆ ನೀಡುವ ಉದಾತ್ತ ಚಿಂತನೆಗಳಿಂದ ರಾಜಕೀಯ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿ ಪ್ರಥಮ ಪ್ರಯತ್ನದಲ್ಲಿಯೇ **ಹೊಸದುರ್ಗದ ಪುರಸಭೆಯ ಕೌನ್ಸಿಲರ್** ಆಗಿ ಆಯ್ಕೆಯಾದರು. ಪ್ರಥಮ ಆದ್ಯತೆಯಾಗಿ ತನ್ನ ಕಾರ್ಯವ್ಯಾಪ್ತಿಗೆ ಬರುವ ನಾಗರೀಕರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ವಿದ್ಯುತ್ ಇಲ್ಲದೆ ಇದ್ದಾಗಲೂ ಬೀದಿ ದೀಪಗಳು ಉರಿಯುತ್ತಿರಬೇಕೆಂದು ಆಶಿಸಿ ಬೀದಿ ದೀಪಗಳಿಗೂ ಯುಪಿಎಸ್ ಅಳವಡಿಸಿ ದೇಶ ತನ್ನ ವಾರ್ಡನತ್ತ ನೋಡುವಂತೆ ಮಾಡಿದ ಸಾಧಕಿ, ಕೇವಲ 34 ವರ್ಷದ ಯುವ ಪ್ರತಿಭೆ ತಾನೂ ಬೆಳೆದು ತನ್ನವರನ್ನು ಬೆಳೆಸಿ ಇಂದಿನ ಯುವ ಜನತೆಗೆ ಆದರ್ಶಪ್ರಾಯರಾಗಿರುವ ಶ್ರೀಮತಿ ಸ್ವಾತಿಪ್ರದೀಪ್‌ರವರ ಸಾಧನೆ ಮೆಚ್ಚಿ 2025ರ ಎಕ್ಸಲೆನ್ಸ್ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.



ಶ್ರೀ ಮಾ
(ಶ್ರೀಮತಿ ಶಾರದಾ ಶ್ರೀಧರ್)
ಮಹಿಳಾ ಸಾಧಕ ವಿಭಾಗ

**ಸಾಧಕ ಮಹಿಳಾ ವಿಭಾಗ:** ಒಬ್ಬ ಮಹಿಳೆ ಕೌಟುಂಬಿಕ ಜೀವನವನ್ನು ಹಾಗೂ ತಾನು ಆಶಿಸಿದ ಪ್ರವೃತ್ತಿಯನ್ನು ಸಮತೋಲನವಾಗಿ ಜೊತೆ ಜೊತೆಗೆ ತೆಗೆದುಕೊಂಡು ಹೋಗುತ್ತಾ ಆದರ್ಶ ಗೃಹಿಣಿಯಾಗಿ, ಆದರ್ಶ ಮಹಿಳೆಯಾಗಿ **ಸಾವಿರಾರು ಜನಗಳ ಪ್ರೀತಿ ಪಾತ್ರರಾಗಿ ಕಿರಿಯರಿಗೆ ಅಕ್ಕನಾಗಿ, ಹಿರಿಯರಿಗೆ ಸೋದರಿಯಾಗಿ, ಕಷ್ಟದಲ್ಲಿರುವವರಿಗೆ ಸಾಂತ್ವಾನ ನೀಡುವ ತಾಯಿಯಾಗಿ ನೊಂದ ಕುಟುಂಬಗಳಿಗೆ ಸಾಂತ್ವಾನ ನೀಡುವ ವೈದ್ಯೆಯಾಗಿ, ಮುದುಡಿರುವ ಮನಸುಗಳನ್ನು ಅರಳಿಸುವ ಹೃದಯವಂತೆಯಾಗಿ, ಸಾಮಾಜಿಕ ಕಾರ್ಯಕರ್ತೆಯಾಗಿ ಅಧ್ಯಾತ್ಮಿಕ ಗುರುವಾಗಿ ಸಹಸ್ರಾರು ನಾಗರೀಕರ ಹೃದಯ ಸಿಂಹಾಸನದಲ್ಲಿ ವಿರಾಜಮಾನರಾಗಿರುವ** ಚಿಕ್ಕಮಗಳೂರು ಮೂಲದ, ಬೆಂಗಳೂರು ನಗರದ ವಾಣಿಜ್ಯೋದ್ಯಮಿ ಶ್ರೀ ಶ್ರೀಧರ್‌ರವರ ಧರ್ಮಪತ್ನಿ **ಶ್ರೀಮತಿ ಶಾರದ ಶ್ರೀಧರ್ (ಶ್ರೀಮಾ)ರವರ** ಸಾಧನೆ ಪದಗಳಿಗೆ ಮೀರಿದ್ದು ಎಂದರೇ ಅತಿಶಯೋಕ್ತಿಯಾಗಲಾರದು. ಪರ್ಯಾಯ ಚಿಕಿತ್ಸಾ ವಿಧಾನಗಳಲ್ಲಿ ಒಂದಾದ ರೇಖಿ ಚಿಕಿತ್ಸೆ ವಿಧಾನದಲ್ಲಿ ಉನ್ನತ ಡಿಗ್ರಿ ಪಡೆದು **ಹತ್ತು ಸಾವಿರಕ್ಕೂ ಮೀರಿದ ವಿದ್ಯಾರ್ಥಿಗಳಿಗೆ ತರಬೇತಿ ನೀಡಿದ್ದಾರೆ.** ಅಧ್ಯಾತ್ಮಿಕ ಜೀವನಕ್ಕೆ ಪಾದಾರ್ಪಣೆ ಮಾಡುವ ಮೂಲಕ ಪ್ರತಿನಿತ್ಯ ಭಗವದ್ಗೀತೆ, ವಿಷ್ಣುಸಹಸ್ರನಾಮ, ಮಹಾರುದ್ರ ಇತ್ಯಾದಿ ವೇದಗಳನ್ನು ಹಿರಿಯ ಗುರುಗಳಿಂದ ಕಲಿತು ಸಾವಿರಾರು ಜನರಿಗೆ ವಿದ್ಯಾದಾನ ಮಾಡುವ ಮೂಲಕ ಮನೆ ಮನೆಯಲ್ಲಿ ಶಾಂತಿ ನೆಲೆಸುವಂತೆ ಮಾಡಿದ್ದಾರೆ. **ಶಾಲಾ ಕಾಲೇಜುಗಳಲ್ಲಿ ವ್ಯಕ್ತಿ ವಿಕಸನ ಶಿಬಿರಗಳನ್ನು ನಡೆಸುವ ಮೂಲಕ ಸಾವಿರಾರು ವಿದ್ಯಾರ್ಥಿಗಳ ಉತ್ತಮ ಭವಿಷ್ಯಕ್ಕೆ ಮಾರ್ಗದರ್ಶನ ನೀಡುತ್ತಾ ಬಂದಿರುತ್ತಾರೆ.** ಇಷ್ಟಲ್ಲದೆ ಕೌಟುಂಬಿಕ ಸಮಸ್ಯೆಗಳು ಎದುರಾದಾಗ ಅವರೊಂದಿಗೆ ಸಮಾಲೋಚನೆ ನಡೆಸಿ ಪರಿಹಾರಗಳನ್ನು ನೀಡಿ ಕುಟುಂಬಗಳ ನೆಮ್ಮದಿಗಾಗಿ ಕಾರ್ಯನಿರ್ವಹಿಸುತ್ತಾ **ದುಃಸ್ಥಿತಿಯ ಮನಸ್ಸುಗಳನ್ನು ಸುಸ್ಥಿತಿಗೆ ತಂದು ಆರೋಗ್ಯ ಪೂರ್ಣ ಸಮಾಜ ನಿರ್ಮಾಣದಲ್ಲಿ** ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿರುವ ಶ್ರೀಮಾ (ಶ್ರೀಮತಿ ಶಾರದ ಶ್ರೀಧರ್)ರವರಿಗೆ 2025ರ ಎಕ್ಸಲೆನ್ಸ್ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.



ಶ್ರೀ ವಿಜಯ ರಾಜ
ಸಾಧಕ-ಪುರುಷ ವಿಭಾಗ

**ಸಾಧಕ ಪುರುಷ:** ಸಿ.ಎ ಪದವಿಯಲ್ಲಿ ಚಿನ್ನದ ಪದಕ, ಕಾನೂನು ಪದವಿಯಲ್ಲಿ ರಾಷ್ಟ್ರಮಟ್ಟದಲ್ಲಿ ಚಿನ್ನದ ಪದಕ ಪುರಸ್ಕೃತ, ವೃತ್ತಿಯಲ್ಲಿ ಲೆಕ್ಕ ಪರಿಶೋಧಕರಾಗಿ ಪ್ರವೃತ್ತಿಯಲ್ಲಿ ಸಿ.ಎ ವಿದ್ಯಾರ್ಥಿಗಳಿಗೆ ಬೋಧಕರಾಗಿ ಕಳೆದ 35 ವರ್ಷಗಳಿಂದ 65000ಕ್ಕೂ ಮೀರಿದ ಸಿ.ಎ ವಿದ್ಯಾರ್ಥಿಗಳಿಗೆ ಭೋದನೆ, ಇವರಲ್ಲಿ ಶಿಕ್ಷಣ ಪಡೆದಿರುವ 1200ಕ್ಕೂ ಮೀರಿದ ವಿದ್ಯಾರ್ಥಿಗಳು ಈ ದೇಶದೆಲ್ಲೆಡೆ ಸಾವಿರಾರು ಕಂಪನಿಗಳಲ್ಲಿ ಸಿಎಫ್‌ಒಗಳಾಗಿ ಕಾರ್ಯ ನಿರ್ವಹಿಸುತ್ತಾ ಆಯಾ ಕಂಪನಿಗಳ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುವುದರೊಂದಿಗೆ ಲಕ್ಷಾಂತರ ಉದ್ಯೋಗಿಗಳ ಭವಿಷ್ಯಕ್ಕೆ ಕಾರಣ ಕರ್ತರಾಗಿದ್ದಾರೆ. ಇಷ್ಟೇ ಅಲ್ಲದೆ ನೂರಾರು ಸಂಖ್ಯೆಯ ವಿದ್ಯಾರ್ಥಿಗಳು ಲೆಕ್ಕ ಪರಿಶೋಧಕ ವೃತ್ತಿಯಲ್ಲಿ ತೊಡಗಿಸಿಕೊಂಡು ರಾಷ್ಟ್ರ ಶಕ್ತಿಯಾಗಿದ್ದಾರೆ. ತಾನೂ ಬೆಳೆದು ಇತರರನ್ನು ಬೆಳೆಸಿ ಗುಣ ಮಟ್ಟದ ಲೆಕ್ಕ ಪರಿಶೋಧಕರನ್ನು ನಾಡಿಗೆ ನೀಡುವ ಮೂಲಕ **ದೇಶದ ಪ್ರಗತಿಯ ಪಾಲುದಾರರಾಗಿರುವ ಶ್ರೀ ಸಿ.ಎ ವಿಜಯ ರಾಜರವರ** ಅಪ್ರತಿಮ ಸಾಧನೆಯನ್ನು ಗುರುತಿಸಿ 2025ರ ವಾಸವಿ ಎಕ್ಸಲೆನ್ಸ್ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.



ಶ್ರೀಮತಿ ಸುಮಾ ಮೂರ್ತಿ
ಸಾಹಿತ್ಯ / ಕಲೆ

**ಸಾಹಿತ್ಯ ಕ್ಷೇತ್ರ:** ಹಾಸನ ಜಿಲ್ಲೆಯ ಅರಕಲಗೂಡಿನಲ್ಲಿ ಜನಿಸಿ, ಮೈಸೂರು ನಗರದಲ್ಲಿ ಬಿ.ಎ ಪದವಿ ಪಡೆದು ಶಿವಮೊಗ್ಗದ ಶ್ರೀ ಹೆಚ್.ಆರ್.ಕೆ ಮೂರ್ತಿಯವರೊಂದಿಗೆ ದಾಂಪತ್ಯ ಜೀವನ ಆರಂಭಿಸಿದ ಶ್ರೀಮತಿ ಸುಮಾಮೂರ್ತಿಯವರು ವಿದ್ಯಾರ್ಥಿ ದೆಸೆಯಿಂದಲೇ ಸಾಹಿತ್ಯ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಸಕ್ರಿಯರಾಗಿದ್ದವರು. ತಮ್ಮ ತೀಕ್ಷ್ಣವಾದ ವಾಗ್ಝರಿಯಿಂದ **ಸಾಮಾಜಿಕ ಪಿಡುಗುಗಳ ವಿರುದ್ಧ ಹೋರಾಟ ನಡೆಸಿ ಜನ ಜಾಗೃತಿ ಮೂಡಿಸಿ,** ಸಂಬಂಧಿಸಿದವರಿಗೆ ಸಾಮಾಜಿಕ ನ್ಯಾಯ ದೊರಕಿಸಿಕೊಡುವಲ್ಲಿ ಪ್ರಮುಖ ಪಾತ್ರವಹಿಸಿದ್ದವರು. ಪ್ರಖರವಾಗ್ಮಿಯಷ್ಟೇ ಅಲ್ಲ ಸಾಹಿತ್ಯ ಕ್ಷೇತ್ರದಲ್ಲಿಯೂ ಉತ್ತಮ ಹೆಸರು ಗಳಿಸಿರುವ ಶ್ರೀಮತಿ ಸುಮಾಮೂರ್ತಿಯವರ ಲೇಖನಗಳು ನಾಡಿನ ಹತ್ತಾರು ಪ್ರಮುಖ ದಿನ ಮತ್ತು ಮಾಸಿಕ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಇಷ್ಟೇ ಅಲ್ಲದೇ ಪ್ರವಾಸ ಕಥನ, ನಾಟಕ ರಚನೆಗಳ ಮೂಲಕ ಸಾಹಿತ್ಯ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಅಪಾರ. ಸಂಗೀತ ಹಾಗೂ ಸಾಂಸ್ಕೃತಿಕ ಕ್ಷೇತ್ರದ ತಾರೆಯಾಗಿ, ಸಂಘಟಕಿಯಾಗಿ ನಾಡಿನ ಸಾಂಸ್ಕೃತಿಕ ಲೋಕಕ್ಕೆ ನೀಡಿರುವ ಸೇವೆ ಅನನ್ಯ. ಶ್ರೀಮತಿ ಸುಮಾಮೂರ್ತಿಯವರ ಸಾಮಾಜಿಕ ಕಳಕಳಿ, ಸಂಗೀತ, ಸಾಹಿತ್ಯ ಕ್ಷೇತ್ರಕ್ಕೆ ನೀಡಿರುವ ಅಸಾಮಾನ್ಯ ಸೇವೆಯನ್ನು ಗುರುತಿಸಿ 2025ರ ಎಕ್ಸಲೆನ್ಸ್ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.



ಶ್ರೀ ಡಿ ಎಲ್ ಮಂಜುನಾಥ
ಉಪಾಧ್ಯಕ್ಷರು,
ಡಿ ಎಸ್ ಎಲ್ ಟ್ರಸ್ಟ್ (ಆರ್)
ಸಮಾಜಸೇವೆ

**ಸಮಾಜ ಸೇವಾಕ್ಷೇತ್ರ:** ಡಿ ಎಸ್ ಎಲ್ ಟ್ರಸ್ಟ್(ರಿ) ಶಿವಮೊಗ್ಗ, ಕರ್ನಾಟಕ ರಾಜ್ಯದ ಒಂದು ಸಾರ್ವಜನಿಕ ಸೇವಾ ಸಂಸ್ಥೆಯಾಗಿದ್ದು, ಉಲ್ಬಣಿಸಿದ ಮತ್ತು ಆಯುಷ್ಯಾವಧಿಯನ್ನು ಸೀಮಿತಗೊಳಿಸುವ ಖಾಯಿಲೆಗಳಾದ ಕ್ಯಾನ್ಸರ್, ಸಂಪೂರ್ಣ ಪ್ಯರಾಲಿಸಿಸ್, ನರರೋಗದಿಂದ ನರಳುತ್ತಿರುವ ಪಾರ್ಕಿನಸನ್ ಮತ್ತು ಅಲ್‌ಜೈಮರ್‌ನ ಗಂಭೀರ ಖಾಯಿಲೆಗಳ ರೋಗಿಗಳ ಸಂಪೂರ್ಣ ಆರೈಕೆಗೆಂದು ಯಾವುದೇ ಫಲಾಪೇಕ್ಷೆ ಇಲ್ಲದೆ ಉಚಿತವಾಗಿ ಸೇವೆ ನೀಡುವಲ್ಲಿ ಶರಣ್ಯ ಸೇವಾ ಯೋಜನೆಯು ಕಾರ್ಯನಿರ್ವಹಿಸುತ್ತಿದೆ. ಇಂತಹ ರೋಗಿಗಳಲ್ಲಿ ಅದರಲ್ಲೂ ವಿಶೇಷವಾಗಿ ಉಲ್ಬಣಿಸಿದ ಕ್ಯಾನ್ಸರ್ ರೋಗಿಗಳಲ್ಲಿ ಸಹಿಸಲಾರದ ನೋವು, ಎದ್ದು ಓಡಾಡುವುದಕ್ಕೂ ಆಗದ ಸುಸ್ತು, ನಿದ್ರೆ ಬಾರದಿರುವಿಕೆ, ಊಟ ಸೇರದಿರುವಿಕೆ, ಮಲಬದ್ಧತೆ ಮತ್ತು ವಾಕರಿಕೆ ಇತ್ಯಾದಿ ಅಡ್ಡಪರಿಣಾಮಗಳನ್ನುಳ್ಳ ಇನ್ನೂ ಕೆಲವು ಕುಟುಂಬಗಳಲ್ಲಿ ರೋಗಿಯ ಒಂಟಿತನ, ಸಾಮಾಜಿಕ ಮೂಢನಂಬಿಕೆ, ತಿರಸ್ಕಾರ, ಪ್ರೀತಿಯ ಕೊರತೆ ಮತ್ತು ಆರೈಕೆ-ಸಾಂತ್ವನ ನೀಡುವವರಿಲ್ಲದೆ ದೈಹಿಕ ಮತ್ತು ಮಾನಸಿಕ ನೋವು ಅನುಭವಿಸುತ್ತಿರುತ್ತಾರೆ. ಇಂತಹ ಸಂದರ್ಭದಲ್ಲಿ ರೋಗಿಗಳಿಗೆ ಅವಶ್ಯವಾದ ಮಾನಸಿಕ ಸ್ಥೈರ್ಯವನ್ನು ತುಂಬಿ, ಶುಶ್ರೂಷೆ, ಸಾಂತ್ವನ ನೀಡುವ ಮೂಲಕ ಮಾನಸಿಕವಗಿ ಧೈರ್ಯವನ್ನು ಹೆಚ್ಚಿಸಿ, ರೋಗಿಗಳ ಮನಸ್ಸಿಗೆ ನೆಮ್ಮದಿ, ನೋವಿಗೆ ಉಪಶಮನ ನೀಡುವಂತಹ ಕಠಿಣ ಕಾರ್ಯವನ್ನು ಕಳೆದ 21 ವರ್ಷಗಳಿಂದ ಯಾವುದೇ ಫಲಾಪೇಕ್ಷೆಯಿಲ್ಲದೆ ನಡೆಸಿಕೊಂಡು ಬರುತ್ತಿದ್ದು ಅಸಂಖ್ಯಾತ ಕುಟುಂಬಗಳಿಗೆ, ರೋಗಿಗಳಿಗೆ ನೆಮ್ಮದಿ ನೀಡಿ ಮಾನವೀಯತೆ ಮರೆದಿರುವ **ಡಿ ಎಸ್ ಎಲ್ ಟ್ರಸ್ಟ್(ರಿ)ನ ಶರಣ್ಯ ಯೋಜನೆಗೆ** 2025ನೇ ಸಾಲಿನ ವಾಸವಿ ಎಕ್ಸಲೆನ್ಸ್ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.



ಕು. ಸಾಯಿ ಸನ್ನಿಧಿ ಎಸ್
ಸಾಧಕ ಮಕ್ಕಳ ವಿಭಾಗ

**ಸಾಧಕ ಮಕ್ಕಳ ವಿಭಾಗ: ಬೆಳೆಯುವ ಪೈರು ಮೊಳಕೆಯಲ್ಲಿ ಎಂಬುದಕ್ಕೆ ಅನ್ವರ್ಥಕ ಕು. ಸಾಯಿ ಸನ್ನಿಧಿ.** ಪುಸ್ತಕದಲ್ಲಿರುವುದನ್ನೇ ಓದಿ ತಿಳಿದುಕೊಂಡು ಬರೆಯಲು ಹರಸಾಹಸ ಪಡುವ ಮಕ್ಕಳನ್ನು ನೋಡಿದ್ದೇವೆ. ಹೇಳಿಕೊಟ್ಟದ್ದನ್ನು ಕೇಳಿ ಬರೆಯಲು ಸಹ ಕಷ್ಟ ಇರುವಂತ ವಯಸ್ಸು ಆದರೆ ಶ್ರೀಮತಿ ಶ್ರೀ ಸುಜಯ್‌ರವರ ಪುತ್ರಿ ಕುಮಾರಿ ಸಾಯಿ ಸನ್ನಧಿ ಶಾಲೆಯಲ್ಲಿ ಪ್ರಥಮ. ಶಿಕ್ಷಣೇತರ ಚಟುವಟಿಕೆಗಳಲ್ಲಿ ಪ್ರಥಮ, ಜೊತೆಗೆ ಸಣ್ಣ ಸಣ್ಣ ಅಸಂಖ್ಯಾತ ನೀತಿಕಥೆಗಳನ್ನು ಬರೆದು ಅದನ್ನು ಪುಸ್ತಕ ರೂಪದಲ್ಲಿ ಹೊರತಂದು ತನ್ನ ವಯೋಮಾನದ ವಿದ್ಯಾರ್ಥಿಗಳಿಗೆ ಆದರ್ಶವಾಗಿದ್ದಾಳೆ. ಕುಮಾರಿ ಸಾಯಿ ಸನ್ನಧಿಯ ಸಾಹಿತ್ಯ ಸೇವೆಯು **ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್, ಏಷಿಯನ್ ಬುಕ್ ಆಫ್ ರೆಕಾರ್ಡ್ಸ್, ಎಲಿಟ್ ವರ್ಡ್ ರೆಕಾರ್ಡ್ಸ್‌ಗಳಲ್ಲಿ** ದಾಖಲಾಗಿ ದೇಶದ ಕೀರ್ತಿಯನ್ನು ಬೆಳಗಿರುತ್ತಾಳೆ. ಚಿಕ್ಕ ವಯಸ್ಸಿನ ಪುಟ್ಟ ಪೋರಿಯ ಮಹತ್ತರ ಸಾಧನೆಯನ್ನು ಗುರುತಿಸಿ 2025ರ ಎಕ್ಸಲೆನ್ಸ್ ಪ್ರಶಸ್ತಿಗೆ ಭಾಜನರಾಗಿದ್ದಾರೆ.

# ಬೆಂಗಳೂರು ಆರ್ಯವೈಶ್ಯ ಮಂಡಳಿಗಳ ಒಕ್ಕೂಟ (ರಿ.)

ನಂ. 16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು - 560009



ಪರಮಪೂಜ್ಯ ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ
ಪೀಠಾಧಿಪತಿಗಳು, ಶ್ರೀ ವಾಸವಿ ಪೀಠಂ



# ಶ್ರೀ ವಾಸವಿ ರಥಯಾತ್ರೆ

## ಆರ್ಯ ವೈಶ್ಯರ ಜಾತ್ರೆ

**ದಿನಾಂಕ 14-12-2025ನೇ ಭಾನುವಾರ, ಬೆಳಿಗ್ಗೆ 9-00 ಗಂಟೆಗೆ**

**ಶ್ರೀ ವಾಸವಿ ಕನ್ಯಕಾಪರಮೇಶ್ವರಿ ದೇವಸ್ಥಾನ ವಿಜಯನಗರದಿಂದ ಹೊರಟು ಹಂಪಿನಗರ ಶ್ರೀ ಚಂದ್ರಶೇಖರ್ ಆಜಾದ್ ಕ್ರೀಡಾಂಗಣದ ವರೆಗೆ ಮೆರವಣಿಗೆ**

### ವಾಸವಿ ರಥಯಾತ್ರೆಯ ವಿಶೇಷ ಆಕರ್ಷಣೆಗಳು

* ಹತ್ತು (10) ವಾಸವಿ ರಥಗಳು
* ಹತ್ತು (10) ಕಲಾತಂಡಗಳು
* 108 ತರಹದ ವಿಶೇಷ ವಾಸವಿ ಆರತಿ
* ವಿಶೇಷ ಬುಲೆಟ್ ಮಹಿಳಾ ಚಾಲಕರು
* ಅವಳಿ-ಜವಳಿ ಮಕ್ಕಳಿಗೆ ಬಹುಮಾನಗಳು,
* ಕೂಡುಕುಟುಂಬದವರಿಗೆ (ಜಾಯಿಂಟ್) ಗೌರವ ಸಮರ್ಪಣೆ,
* ಸಾಂಸ್ಕೃತಿಕ ಫ್ಯಾಷನ್ ಶೋ - ಅತ್ತೆಸೊಸೆ - ಅಮ್ಮ ಮಕ್ಕಳು

ಮುಖ್ಯ ಆಹ್ವಾನಿತರು
**ಶ್ರೀ ಆರ್.ಪಿ. ರವಿಶಂಕರ್**
ಅಧ್ಯಕ್ಷರು, ಕರ್ನಾಟಕ ಆರ್ಯವೈಶ್ಯ ಮಹಾಸಭಾ (ರಿ.)

ಅಧ್ಯಕ್ಷತೆ
**ಶ್ರೀ ಬಿ. ನಾಗಮಹೇಶ್**
ಅಧ್ಯಕ್ಷರು, ಬೆಂಗಳೂರು ಆರ್ಯವೈಶ್ಯ ಮಂಡಳಿಗಳ ಒಕ್ಕೂಟ (ರಿ.)

ರಥಯಾತ್ರೆಯ ಛೇರ್ಮನ್
**ಶ್ರೀ ಸಿ.ವಿ. ಅಶೋಕ್ ಕುಮಾರ್**

ಪ್ರಧಾನ ಕಾರ್ಯದರ್ಶಿ
**ಶ್ರೀ ಆರ್. ಶ್ರೀನಿವಾಸ್**

ಖಜಾಂಚಿ
**ಶ್ರೀ ಟಿ.ಎ. ಬದರಿನಾಥ್**

ಕಾರ್ಯದರ್ಶಿಗಳು :
**ಶ್ರೀ ಬಿ.ಜಿ. ಶ್ರೀದತ್ತ,**
**ಶ್ರೀ ಟಿ.ಎನ್. ಅಶೋಕ್**

ಉಪಾಧ್ಯಕ್ಷರು
**ಶ್ರೀ ಎ.ಎಸ್.ಎನ್. ಗುಪ್ತ**
**ಶ್ರೀ ಜಿ.ಪಿ. ನಾಗೇಶ್**
**ಶ್ರೀ ವೈ.ಜಿ. ರಮೇಶ್‌ಬಾಬು**
**ಶ್ರೀ ಕೆ.ವಿ. ಸತ್ಯನಾರಾಯಣ ಗುಪ್ತ**

**ಬನ್ನಿ ಎಲ್ಲಾ ಆರ್ಯ ವೈಶ್ಯ ಬಂಧುಗಳೇ ಈ ಕಾರ್ಯಕ್ರಮವನ್ನು ಸಡಗರ ಸಂಭ್ರಮದಿಂದ ಹಬ್ಬದಂತೆ ಆಚರಿಸೋಣ.**

ಮುದ್ರಕರು: ಗಿರೀಶ್ ಪ್ರಿಂಟರ್ಸ್, ನಂ.161/2, 1ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು - 560 020 ಇ-ಮೇಲ್ : info@gireeshprinters.com website : www.gireeshprinters.com
ಸಂಪಾದಕರು ಮತ್ತು ಪ್ರಕಾಶಕರು: ರಾ ಪ ರವಿಶಂಕರ್ ಕರ್ನಾಟಕ ಆರ್ಯವೈಶ್ಯ ಮಹಾಸಭಾ ಪರವಾಗಿ, 16, ಶೇಷಾದ್ರಿರಸ್ತೆ, ಗಾಂಧಿನಗರ, ಬೆಂಗಳೂರು-09 ಫೋನ್: 22206151/22206152